# ವಿವಾಹಪೂರ್ವ ಆಪ್ತಸಮಾಲೋಚನೆ

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರ
(ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್)
ನಿರ್ದೇಶನಗಳು

ಪ್ರಕಾಶಕರು
ನಝಾರತ್ ನಶ್ರೊ ಇಶಾಅತ್–ಖಾದಿಯಾನ್

# ವಿವಾಹಪೂರ್ವ

# ಆಪ್ತಸಮಾಲೋಚನೆ (ಕೌನ್ಸಿಲಿಂಗ್)


## ಹಜ಼್ರತ್ ಖಲೀಫ಼ತುಲ್ ಮಸೀಹ್ ಖಾಮಿಸ್‌ರ

(ಅಯ್ಯದಹುಲ್ಲಾಹು ತಆಲ ಬಿನಸ್‌ರಿಹಿಲ್ ಅಝೀಝ್)


## ನಿರ್ದೇಶನಗಳು.


**ಪ್ರಕಾಶಕರು:**

**ನಝಾರತ್ ನಶ್‌ರೊ ಇಶಾಅತ್**

**ಖಾದಿಯಾನ್**

# NOTES BARAYE COUNSELLING
# QABL AZ SHADI (Urdu)

(Guidance from Hadhrat Khalifatul Masih V)

# VIVAAHA POORVA AAPTHA SAMAALOCHANE

(Kannada Translation)

Translated by : Moulavi Inamullah

Revised by : Muhammad Yusuf

Assisted by : M.Ubeidullah

Published by : Nazarat Nashro - Isha'at, Qadian

Sponsered by : Mansooba Bandi Committee Bharat,
Qadian – 143516 Distt. Gurdaspur,
Punjab, India

First Edition: 2015

Copies: 500

Printed by: Fazl-e-Umar Printing Press, Qadian

| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1 | ಮುನ್ನುಡಿ | 5 |
| 2 | ಪರಿಚಯ | 8 |
| 3 | ವಿವಾಹಕ್ಕೆ ಮುಂಚೆ | 8 |
| 4 | ನಿಕಾಹ್ ಬಗ್ಗೆ ಒಪ್ಪಿಗೆ | 9 |
| 5 | ಹಕ್ ಮಹರ್ | 9 |
| 6 | ಗಂಡನ ಮನೆ | 10 |
| 7 | ಹುಡುಗಿಗೆ ಕೊಡುವ ಉಡುಗೊರೆ | 12 |
| 8 | ಪರಸ್ಪರ ಕರ್ತವ್ಯ ನಿರ್ವಹಣೆಯ ನಿರೀಕ್ಷೆ | 13 |
| 9 | ವೈಯಕ್ತಿಕ ವಿಷಯಗಳ ಕುರಿತು ವಿಶದೀಕರಣೆ | 14 |
| 10 | ವಿವಾಹ ಸಮಾರಂಭ | 15 |
| 11 | ವಿವಾಹ ವೇಳೆಯಲ್ಲಿ ನೀಡಲಾಗುವ ಆಭರಣಗಳು | 16 |
| 12 | ವಿವಾಹದ ಉಡುಗೊರೆಗಳು | 16 |
| 13 | ಹನಿಮೂನ್ | 17 |
| 14 | ತಂದೆ –ತಾಯಿಯೊಂದಿಗೆ ಹುಡುಗನ ವಾಸ | 17 |
| 15 | ಅಡೆ – ತಡೆಗಳನ್ನು ದೂರಮಾಡಲು ಈ ಸಂಗತಿಗಳನ್ನು ಗಮನಲ್ಲಿಡಿರಿ | 23 |
| 16 | ಇವರಿಂದ ತಮ್ಮನ್ನು ಪಾರಾಗಿಸಿರಿ | 26 |
| 17 | ತನ್ನ ಸಂಗಾತಿಯೊಂದಿಗೆ ಬೇರೆಯಾಗಿ ಜೀವನ ಸಾಗಿಸುವುದು | 26 |
| 18 | ಹಣಕಾಸು | 28 |
| 19 | ಜನರನ್ನು ಆಮಂತ್ರಿಸುವುದು | 30 |
| 20 | ಸಂಬಂಧಿಕರನ್ನು ಭೇಟಿಯಾಗುವುದು | 30 |
| 21 | ರಜೆಗಳು | 30 |
| 22 | ಮಕ್ಕಳು | 30 |
| 23 | ಹಣ ಮತ್ತು ಸೊತ್ತು | 31 |
| 24 | ರಿಶ್ತನಾತ ಸಮಿತಿ ಕೆನಡಕ್ಕೆ ನಿರ್ದೇಶನಗಳು | 31 |
| 25 | ರಿಶ್ತನಾತ ಸಮಿತಿ ಯು.ಕೆ.ಗೆ ನಿರ್ದೇಶನಗಳು | 40 |

# ಮುನ್ನುಡಿ

ಪ್ರವಾದಿತ್ವದ ನಂತರ ನೈಜ ಖಿಲಾಫತ್ ರಾಶಿದ ಎಂಬುದು ಸತ್ಯವಿಶ್ವಾಸಿ ಮತ್ತು ಸಜ್ಜನರಿಗೆ ಅಲ್ಲಾಹನ ಮಹತ್ತಾದ ಅನುಗ್ರಹವಾಗಿದೆ. ಪ್ರವಾದಿಯ ನಿಧನದ ನಂತರ ಸ್ಥಾಪಿತವಾಗುವ ಖಿಲಾಫತ್ ನಾನಾ ಬಗೆಯ ಅಂಧಕಾರದ ಮಾರ್ಗದಿಂದ ಹಾದು ಹೋಗಲು ದೀಪವಾಗಿರುತ್ತದೆ. ಯಥಾರ್ಥ ಖಲೀಫ ಜೀವನದ ಪ್ರತಿ ಒಂದು ಮಗ್ಗಲನ್ನು ಶರೀಅತ್ ಮತ್ತು ದೇವೇಚ್ಛೆಯ ಪ್ರಕಾರ ವ್ಯಕ್ತಪಡಿಸಿ ಅವುಗಳನ್ನು ಯಶಸ್ವಿ ಮತ್ತು ಫಲಪ್ರದವನ್ನಾಗಿ ಮಾಡಲಿಕ್ಕೆ ಅತ್ಯಧಿಕವಾದ ಪ್ರಯತ್ನ ಮಾಡುತ್ತಾರೆ. ಅವರು ನೈತಿಕ, ಆಧ್ಯಾತ್ಮಿಕ, ಕೌಟುಂಬಿಕ, ಸಾಮುದಾಯಿಕ, ರಾಜಕೀಯ ಜೀವನದ ಸರಿಯಾದ ಮತ್ತು ನೇರವಾದ ರೇಖೆಯನ್ನು ಸ್ಥಾಪಿಸಿ ಮನುಷ್ಯನ ವ್ಯವಹಾರದಲ್ಲಿ ಪರಿಶುದ್ಧತೆ ಉಂಟುಮಾಡುವುದರೊಂದಿಗೆ ದೇವನಿಗೆ ಸಂಬಂಧಿಸಿ ಮಾಡಬೇಕಾದ ಕರ್ತವ್ಯಗಳ ಕಡೆಗೆ ಪ್ರಾರ್ಥನೆಯೊಂದಿಗೆ ನಮ್ಮ ಗಮನಹರಿಸುತ್ತಾರೆ. ಒಟ್ಟಿನಲ್ಲಿ ಎಲ್ಲ ವಿಧದ ಉನ್ನತ ಅಭಿವೃದ್ಧಿಗಳ ಖಾತರಿ ಕೇವಲ ಖಿಲಾಫತ್ ಆಗಿದೆ.

ವಿವಾಹ ಸಂಬಂಧದ ಸಂಗತಿಗಳು ಸಾಧಾರಣವಾಗಿ ಅತಿ ಸೂಕ್ಷವಾದುದಾಗಿದೆ. ಈ ವಿಷಯದಲ್ಲಿ ಸರಿಯಾದ ತತ್ವಗಳನ್ನು ಪಾಲಿಸದಿರುವುದರಿಂದ ಅಸಂಖ್ಯಾತ ಸಮಸ್ಯೆಗಳು ಉಂಟಾಗುತ್ತವೆ ಮತ್ತು ಪದೇ ಪದೇ ತಕರಾರುಗಳು ಆಗುತ್ತಿರುತ್ತವೆ. ಇದರ ಪರಿಣಾಮವಾಗಿ ಮನೆಯ ಶಾಂತಿ ಮತ್ತು ನೆಮ್ಮದಿ ಕೊನೆಗೊಳ್ಳುತ್ತದೆ. ಅಸಮಾಧಾನ ನಮ್ಮನ್ನು ಎಲ್ಲ ರೀತಿಯಲ್ಲಿ ಅಧೋಗತಿಗೆ ನೂಕಿ ಕೊನೆಗೆ ನಾಶವನ್ನುಂಟು ಮಾಡುತ್ತದೆ. ಇದರ ಉದಾಹರಣೆ ಎಲ್ಲ ಸಮಾಜಗಳಲ್ಲಿ ಕಾಣಬಹುದಾಗಿದೆ. ಅವರಿಗೆ ಸರಿಯಾದ ಮಾರ್ಗದರ್ಶನ ನೀಡಲು ಯಾರೂ ಇಲ್ಲ. ಅಹ್ಮದಿಯಾ ಜಮಾಅತಿನಲ್ಲಿ ಅಲ್ಲಾಹನ ಅನುಗ್ರಹದಿಂದ ಪ್ರವಾದಿತ್ವದ ಮಾರ್ಗದಲ್ಲಿನ ಖಿಲಾಫತಿನ ಅತಿಶ್ರೇಷ್ಠ ವ್ಯವಸ್ಥೆ ನೆಲೆನಿಂತಿದೆ. ಅಹ್ಮದಿಯಾ ಜಮಾಅತ್ ಖಿಲಾಫತಿನ ಮಾರ್ಗದರ್ಶನದಲ್ಲಿ ಜೀವನದ ಎಲ್ಲ ಮಗ್ಗಲುಗಳಲ್ಲಿ ಏಳಿಗೆಯ ಮಜಲುಗಳನ್ನು ದಿನನಿತ್ಯ ದಾಟುತ್ತಿದೆ. ವಿವಾಹ ಮತ್ತು ಕೌಟುಂಬಿಕ

ಸಂಬಂಧಗಳ ದೃಢತೆ ಮತ್ತು ನೆಲೆನಿಲ್ಲುವಿಕೆಗಾಗಿ ಸಹ ನಮ್ಮ ಪ್ರಿಯ ಇಮಾಮರಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಸದಾ ಪ್ರಯತ್ನ ಮತ್ತು ಮಾರ್ಗದರ್ಶನ ನೀಡುತ್ತಿರುತ್ತಾರೆ. ಉತ್ತಮವಾದ ವಿವಾಹ ಸಂಬಂಧ ಸ್ಥಾಪಿಸಲು ಪದೇ ಪದೇ ಎಲ್ಲ ಯೋಜನೆಗಳನ್ನು ಮಾಡುತ್ತಾರೆ ಮತ್ತು ಸುಧಾರಣೆಯ ಕಡೆಗೆ ವಿಶೇಷವಾದ ಗಮನ ಹರಿಸುತ್ತಾರೆ. ಮುಂದಿನ ಪುಟಗಳಲ್ಲಿ ವಿವಾಹ ಕೌನ್ಸಿಲಿಂಗ್ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸರು(ಅಯ್ಯದಹುಲ್ಲಾಹ್) ವಿವಿಧ ಸಂದರ್ಭಗಳಲ್ಲಿ ನೀಡಿದ ಮುಖ್ಯವಾದ ಮಾರ್ಗದರ್ಶನಗಳು ಮತ್ತು ಉಪದೇಶಗಳನ್ನು ಓದುಗರ ಮುಂದಿರಿಸಲಾಗಿದೆ. ಅಲ್ಲಾಹನು ಅವುಗಳನ್ನು ಎಲ್ಲ ರೀತಿಯಲ್ಲಿ ಜನರಿಗೆ ಫಲದಾಯಕವನ್ನಾಗಿ ಮಾಡಲಿ. ನಝಾರತ್ ನಶ್ರ್ ವ ಇಶಾಅತ್ ಖಾದಿಯಾನಿನ ವ್ಯವಸ್ಥೆಯ ಅಡಿಯಲ್ಲಿ ಮನ್ಸೂಬ ಬಂದಿ ಸಮಿತಿ ಭಾರತ ಈ ಮಾರ್ಗದರ್ಶನಗಳನ್ನು ಸಣ್ಣ ಪುಸ್ತಕದ ರೂಪದಲ್ಲಿ ಪ್ರಕಟಿಸಲು ಸೌಭಾಗ್ಯ ಪಡೆಯುತ್ತಿದೆ. ಅಲ್‌ಹಮ್ದುಲಿಲ್ಲಾಹ್.

ನಾಝಿರ್ ನಶ್ರೊ ಇಶಾಅತ್

بسم اللهِ الرّحمٰن الرّحيم

## ವಿವಾಹಪೂರ್ವ ಆಪ್ತಸಮಾಲೋಚನೆ (ಕೌನ್ಸಿಲಿಂಗ್) ಬಗ್ಗೆ ಟಿಪ್ಪಣಿ

ಈ ಕಾರ್ಯವನ್ನು ಪ್ರಾರ್ಥನೆಯೊಂದಿಗೆ ಶುರುಮಾಡಬೇಕು. ಗಂಡ – ಹೆಂಡತಿಯರ ಮತ್ತು ಕೋಣೆಯಲ್ಲಿ ಇರುವ ಎಲ್ಲರ ಮುಂದೆ ತಮ್ಮನ್ನು ತಾವೇ ಪರಿಚಯಿಸಬೇಕು. **ತಖ್ವಾ** (ಭಯಭಕ್ತಿ) ಎಂಬ ಪದವನ್ನು ನಿಕಾಹ್ ಖುತ್‌ಬದಲ್ಲಿ ಐದು ಸಲ ಪ್ರಸ್ತಾಪಿಸಲಾಗಿದೆ ಮತ್ತು ವಿವಾಹದ ತಳಹದಿ ತಖ್ವಾ ಆಗಿದೆ ಎಂಬ ಸಂಗತಿಯನ್ನು ಹೇಳಬಹುದಾಗಿದೆ.

ಸಂದರ್ಶನ (ಇಂಟರ್ವ್ಯೂ) ಸುಮಾರು ಒಂದು ಗಂಟೆಯದ್ದಾಗಿರಲಿ. ಇದಕ್ಕಿಂತ ಅಧಿಕವಾಗಿರಬಾರದು. ನಡೆಸುವ ವಿಧಾನವನ್ನು ಸ್ವಾರಸ್ಯಕರವನ್ನಾಗಿ ಮಾಡಿರಿ. ಅದರಲ್ಲಿ ಮಾತುಕತೆ ಮತ್ತು ಸಂಭಾಷಣೆ ಇರಲಿ, ಕೇವಲ ನಿರ್ದೇಶನಗಳು ಆಗದಿರಲಿ.

**ಮುಖ್ಯವಾದ ಟಿಪ್ಪಣಿ:**

**ಆಪ್ತ ಸಮಾಲೋಚನೆಯಲ್ಲಿ ಧಾರ್ಮಿಕ ವಿಶ್ವಾಸಾದರ್ಶಗಳನ್ನು ಕಲಿಸುವುದು ಅಥವಾ ತರಬೇತುಗೊಳಿಸುವುದು ಅಥವಾ ಅವರ ಆಧ್ಯಾತ್ಮಿಕ ನೆಲೆಯನ್ನು ಉನ್ನತಗೊಳಿಸುವುದು ಮುಖ್ಯವಲ್ಲ. ಗಂಡ – ಹೆಂಡತಿಯರಿಗೆ ವಿವಾಹದಲ್ಲಿ ಸಾಮಾನ್ಯವಾಗಿ ಕಷ್ಟತೆಗಳನ್ನು ಎದುರಿಸಬೇಕಾಗಿ ಬರುವ ಸಮಸ್ಯೆಗಳ ಬಗ್ಗೆ ಹಾಗು ಇವುಗಳಿಂದ ಹೇಗೆ ಪಾರಾಗಬಹುದೆಂಬುದರ ಬಗ್ಗೆ ಹೇಳಿಕೊಡಬೇಕು. ಧಾರ್ಮಿಕ ಅರಿವನ್ನು ವರ್ಧಿಸುವುದು, ತರಬೇತಿ ಮತ್ತು ಆಧ್ಯಾತ್ಮಿಕ ಮಟ್ಟವನ್ನು ಉನ್ನತಗೊಳಿಸುವುದು ಹೆಚ್ಚುವರಿ ಸಂಗತಿಗಳಾಗಿವೆ. ಅವು ಒಟ್ಟೊಟ್ಟಿಗೆ ಲಭಿಸುತ್ತಲಿರುವುದು ಎಂಬ ಪ್ರತೀಕ್ಷೆಯಿದೆ. (ಇವು ಗಂಡ – ಹೆಂಡತಿಯರ ಮೇಲೆ ಅವಲಂಬಿತವಾಗಿವೆ.)**

**ಪರಿಚಯ:** ವಿವಾಹಿತ ಜೋಡಿಗಳ ವರ್ಧಿಸುತ್ತಿರುವ ಸಮಸ್ಯೆಗಳ ಕಾರಣ ಗಂಡ – ಹೆಂಡತಿಯರಿಗೆ ಈ (ಇತರ ಜೋಡಿಗಳಿಗೆ ಎದುರಾಗುವ) ಸಮಸ್ಯೆಗಳ ಕುರಿತು ಎಚ್ಚರಿಸಬೇಕಾದುದು ಅವಶ್ಯವೆಂದು ತಿಳಿಯಲಾಗಿದೆ.

ಈ ಮೀಟಿಂಗ್ ನಿಮ್ಮ ತಿಳಿವಳಿಕೆಗಾಗಿದೆ ಮತ್ತು ನಿಮ್ಮನ್ನು ಮುನ್ನೆಚ್ಚರಿಸಲು ಮತ್ತು ತಯಾರು ಮಾಡಲಿಕ್ಕಾಗಿದೆ.

**ವಿವಾಹಕ್ಕೆ ಮುಂಚೆ:** ಒಂದು ವಿವಾಹ ಪ್ರಾರಂಭವಾಗುವ ಮುನ್ನವೇ ಅದು ಮುರಿದು ಹೋಗಲು ಕಾರಣವಾಗುವಂತಹ ಬಹಳಷ್ಟು ಸಮಸ್ಯೆಗಳು ಇವೆ ಎಂಬುದು ಆಶ್ಚರ್ಯಕರವಾದ ಸಂಗತಿಯಾಗಿದೆ.

**ವಿವಾಹಕ್ಕೆ ಮುಂಚಿತವಾಗಿಯೇ ತಲೆದೋರಿ ವಿವಾಹದ ನಂತರ ಉಕ್ಕಿ ವಿವಾಹದಲ್ಲಿ ತಡೆಯುಂಟು ಮಾಡುವ ಅಥವಾ ನಾಶವನ್ನುಂಟು ಮಾಡುವಂತಹ ಸಮಸ್ಯೆಗಳ ಕುರಿತು ಮುನ್ನೆಚ್ಚರಿಕೆ ವಹಿಸಿರಿ.**

ವಿವಾಹ ಎರಡು ವ್ಯಕ್ತಿಗಳು ಮತ್ತು ಎರಡು ಕುಟುಂಬಗಳ ಮಧ್ಯೆ ಆಗುತ್ತದೆ. ಎರಡು ವ್ಯಕ್ತಿಗಳ ನಡುವಿನ ಸಮಸ್ಯೆಗಳನ್ನು ಪರಿಹರಿಸುವುದು ಎರಡು ಕುಟುಂಬಗಳ ನಡುವಿನ ಸಮಸ್ಯೆಗಳನ್ನು ಪರಿಹರಿಸುವುದಕ್ಕಿಂತ ಕೊಂಚಮಟ್ಟಿಗೆ ಸುಲಭವಾದುದಾಗಿದೆ. ಏಕೆ? ಏಕೆಂದರೆ ಕುಟುಂಬದಲ್ಲಿ ಎರಡಕ್ಕಿಂತ ಅಧಿಕ ವ್ಯಕ್ತಿಗಳು ಇರುತ್ತಾರೆ. ಅವರ ಸಂಪ್ರದಾಯಗಳು, ಅಭ್ಯಾಸಗಳು ಮತ್ತು ನಡತೆಗಳು ವರ್ಷಾಂತರಗಳಿಂದ ಅವರೊಟ್ಟಿಗೆ ನಡೆದು ಬಂದಿದ್ದವು ಮತ್ತು ಬೇರೂರಿದ್ದವು ಆಗಿರುತ್ತವೆ. ಸಂಪೂರ್ಣ ಕುಟುಂಬವನ್ನು ನೇರವಾಗಿ ಎದುರಿಸಬಾರದು ಎಂದು ಗಂಡ – ಹೆಂಡತಿಯರಿಗೆ ಸಲಹೆ ನೀಡಲಾಗುತ್ತದೆ. ನೀವು ಸ್ವತಃ ನಿಮ್ಮ ಕುಟುಂಬ ಮತ್ತು ನಿಮ್ಮ ಸಂಪ್ರದಾಯ ಮಾಡುವಿರಿ. ಆದರೆ ನೀವು ಹಾಗೆ ಮಾಡುವುದಕ್ಕಿಂತ ಎರಡೂ ಕುಟುಂಬಗಳು ಪಾಲಿಸುತ್ತಿರುವ, ಸ್ಪಷ್ಟವಾಗಿ ಇಸ್ಲಾಮೇತರವಲ್ಲದ ಸಂಪ್ರದಾಯಗಳು, ಅಭ್ಯಾಸಗಳು ಮತ್ತು ನಡತೆಗಳನ್ನು ಅಂಗೀಕರಿಸುವುದು ಅಥವಾ ಸಹಿಸುವುದು ಉತ್ತಮ.

**ಈ ಕೆಳಗಿನ ನಿರ್ದೇಶನಗಳನ್ನು ಸಹ ಕೌನ್ಸಿಲಿಂಗ್‌ನಲ್ಲಿ ಒಳಪಡಿಸಲು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್**[(ಅಯ್ಯದಹುಲ್ಲಾಹ್)] **ಉಪದೇಶಿಸಿದ್ದಾರೆ:**

ಯಾವುದಾದರೂ ಹುಡುಗ ಅಥವಾ ಹುಡುಗಿ ಯಾವುದಾದರೂ ಬೇರೆ ಅಹ್ಮದಿಯನ್ನು ವಿವಾಹವಾಗಲು ಇಚ್ಛಿಸುತ್ತಿದ್ದೂ ಈಗಿನ ಸಂಬಂಧ ಒತ್ತಾಯದ ಕಾರಣದಿಂದ ಮಾಡಬೇಕಾಗಿ ಬರುತ್ತಿರುವ ಸ್ಥಿತಿಯಲ್ಲಿ ಹೆತ್ತವರು ಅಧಿಕ ಅಡೆತಡೆ ಒಡ್ಡದಿರುವುದೇ ಉತ್ತಮ. ದುಆ ಮತ್ತು ಇಸ್ತಿಖಾರಃ ಮಾಡಿ ಅಥವಾ ಮಾಡಿಸಿದ ನಂತರ ಮಗ ಅಥವಾ ಮಗಳು ಬಯಸುವ ಪ್ರಕಾರದ ಸಂಬಂಧವನ್ನು ಒಪ್ಪಿಕೊಳ್ಳುವುದು ಉತ್ತಮ.

**1. ನಿಕಾಹ್ ಬಗ್ಗೆ ಒಪ್ಪಿಗೆ:**

ಎರಡೂ ಪಕ್ಷ ನಿಕಾಹಿಗೆ ಪರಸ್ಪರ ಸಮ್ಮತವೇ?

ಯಾವುದಾದರೂ ಪಕ್ಷವನ್ನು ಅವರ ಇಷ್ಟಕ್ಕೆ ವಿರುದ್ದವಾಗಿ ನಿಕಾಹ್ ಮಾಡಲು ಒತ್ತಾಯಿಸಲಾಗಿದೆಯೇ?

ಯಾವುದಾದರೂ ಒಂದು ಪಕ್ಷ ಬೇರೆ ಯಾರನ್ನಾದರೂ ವಿವಾಹ ಮಾಡಲು ಇಚ್ಛಿಸುತ್ತಿದೆಯೇ ಅಥವಾ ಬೇರೆ ಯಾರನ್ನಾದರೂ ಪ್ರೀತಿಸುತ್ತಿದೆಯೇ?

**2. ಹಕ್ ಮಹರ್:**

ಗಂಡನ ಕಡೆಯಿಂದ ಹೆಂಡತಿಗೆ ಕಡ್ಡಾಯವಾಗಿ ಸಂದಾಯ ಮಾಡಬೇಕಾದ ಹಕ್ ಮಹರ್ ನಿಶ್ಚಯಿಸಲಾಗಿದೆಯೇ?

ವಿವಾಹದ ಮೊದಲ ದಿನದಿಂದ ಹಕ್ ಮಹರ್ ಹೆಂಡತಿಯ ಹಕ್ಕಾಗಿದೆ. ಅವಳ ಈ ಹಕ್ಕನ್ನು ನಿಷೇಧಿಸಲಾಗದು – ದಾರುಲ್ ಖಝಾ ಕೆಲವು ಪ್ರತ್ಯೇಕ ಸ್ಥಿತಿಯಲ್ಲಿ ಸ್ವತಃ ಹೀಗೆ ಮಾಡಲು ತೀರ್ಮಾನಿಸುವುದರ ಹೊರತು.

ಹಕ್ ಮಹರ್ ಸಂದಾಯ ಮಾಡದಿರಲು ಕೇವಲ ಇರುವ ಸಂದರ್ಭವೇನೆಂದರೆ, ಹೆಂಡತಿ ಸ್ವತಃ ಈ ಹಕ್ಕನ್ನು (ಗಂಡನ ಕಡೆಯಿಂದ ಯಾವುದೇ ರೀತಿಯ ಪ್ರೇರಣೆ ಅಥವಾ ಪ್ರಚೋದನೆ ಇಲ್ಲದೇ) ಪರಿಪೂರ್ಣ ಸಂತೋಷದಿಂದ ಬಿಟ್ಟುಬಿಡುವುದು ಅಥವಾ ಮಹರ್ ಪಡೆದ ನಂತರ ಅದನ್ನು ಮರಳಿಸುವುದು.

ಹಕ್ ಮಹರ್ ಉಭಯ ಪಕ್ಷಗಳ ಪರಸ್ಪರ ಸಮ್ಮತದೊಂದಿಗೆ ನಿಶ್ಚಯಿಸಲಾಗಿದೆಯೇ?

ಹಕ್ ಮಹರಾಗಿ ನಿಶ್ಚಯಿಸಲ್ಪಟ್ಟ ಮೊತ್ತ/ಚಿನ್ನದಲ್ಲಿ ಉಭಯ ಪಕ್ಷಗಳು ಸಂತೃಪ್ತರೇ? [ನಿಕಾಹ್ ಫಾರ್ಮಿನಲ್ಲಿ ಸಹಿ ಮಾಡುವಾಗ ಇದರಲ್ಲಿ ಯಾವುದಾದರೂ ಪಕ್ಷದ ಕಡೆಯಿಂದ ಯಾವುದಾದರೂ ಬದಲಾವಣೆ ಮಾಡಲಾಗಿದೆಯೇ.] ಹಕ್ ಮಹರಿನಲ್ಲಿ (ಮೊತ್ತ/ಚಿನ್ನ) ಯಾವುದಾದರೂ ಬದಲಾವಣೆ ಮಾಡಿರುವುದಾದರೆ, ಉಭಯ ಪಕ್ಷಗಳು ಇದರಲ್ಲಿ ಪರಸ್ಪರ ಸಮ್ಮತವೇ?

ಪ್ರಸಿದ್ಧಿಯ ಉದ್ದೇಶದಿಂದ ಹೆಚ್ಚಿಸಲಾದ ಹಕ್ ಮಹರ್ ಖಂಡಿತವಾಗಿಯೂ ಸ್ವೀಕಾರಾರ್ಹವಲ್ಲ. ಇದರ ಆಧಾರದಲ್ಲಿ ಎಂದೂ ನಿಕಾಹ್ ಘೋಷಿಸಬಾರದು.

**3. ಗಂಡನ ಮನೆ:**

ಸಮಾಜದಲ್ಲಿ ಸಾಧಾರಣವಾಗಿ ಹುಡುಗಿಯನ್ನು (ತವರು ಮನೆಯಿಂದ) ಬೀಳ್ಕೊಡಲಾಗುತ್ತದೆ ಮತ್ತು ಅವಳು ತನ್ನ ಗಂಡನ ಮನೆಗೆ ಹೋಗಿ ನೆಲಸುತ್ತಾಳೆ. ಕೆಲವು ಸಲ ಇದಕ್ಕೆ ಭಿನ್ನವಾದ ಉದಾಹರಣೆಗಳು ಸಹ ಉಂಟಾಗುತ್ತವೆ. ಆದರೆ ಅದೂ ಪರಸ್ಪರ ಒಪ್ಪಿಗೆ ಮತ್ತು ಒಮ್ಮನಸಿನೊಂದಿಗೆ ಆಗಿರಬೇಕು.

ಹುಡುಗಿ (ಗಂಡನ) ತಂದೆ – ತಾಯಿಯ ಮನೆಯಲ್ಲಿ (ಅವನ) ತಂದೆ – ತಾಯಿಯೊಂದಿಗೆ ವಾಸಿಸುವಳು ಮತ್ತು ಅದೇ ಗಂಡನ

ಮನೆಯೆಂದು ಗಣಿಸಲಾಗುವುದು ಎಂಬ ಸಂಗತಿ ಸ್ಪಷ್ಟಪಡಿಸಲಾಗಿದೆಯೇ? ಇದರ ಬಗ್ಗೆ ಯಾವುದೇ ಸಂದೇಹ (ಅಸ್ಪಷ್ಟತೆ) ಇರಬಾರದು.

ತಂದೆ – ತಾಯಿಯೊಂದಿಗೆ ವಾಸಿಸುವ ಕಾಲಾವಧಿ ಒಂದು ನಿರ್ದಿಷ್ಟ ಅವಧಿ ಆಗಿರುವುದು ಎಂಬ ವಿಷಯದಲ್ಲಿ ಯಾವುದಾದರೂ ಅನ್ಯೋನ್ಯ ಒಪ್ಪಿಗೆ ಉಂಟಾಗಿದೆಯೇ? ಇಲ್ಲವಾದರೆ, ಈ ವ್ಯವಸ್ಥೆ ದೀರ್ಘಕಾಲ ಇರುವುದೋ ಪರಿಮಿತವಾದ ಕಾಲ ತನಕ ಇರುವುದೋ ಎಂದು ಆರಂಭದಲ್ಲಿಯೇ ಸ್ಪಷ್ಟಪಡಿಸಿರಬೇಕು. ಉಭಯ ಪಕ್ಷಕ್ಕೆ ಈ ಸಂಗತಿ ಸ್ಪಷ್ಟವಾಗಿರಬೇಕು ಎಂದು ಮಾತ್ರವಲ್ಲ ಈ ವಿಷಯದಲ್ಲಿ ಉಭಯ ಪಕ್ಷಗಳ ಪರಸ್ಪರ ಸಮ್ಮತಿ ಸಹ ಆವಶ್ಯವಾದುದಾಗಿದೆ.

ಗಂಡನ ಮನೆ (ಅವನ) ತಂದೆ – ತಾಯಿಯ ಮನೆಯಿಂದ ಬೇರೆಯಾಗಿರುವುದು ಎಂಬುದರಲ್ಲಿ ಯಾವುದಾದರೂ ಪರಸ್ಪರ ಸಮ್ಮತಿ ಅಥವಾ ಒಪ್ಪಿಗೆ ಮಾಡಲಾಗಿದೆಯೇ? ಹಾಗೆ ಆದರೆ ಮನೆಯ ಪೀಠೋಪಕರಣಗಳ (ಕುರ್ಚಿ, ಮೇಜು ಇತ್ಯಾದಿ) ಕುರಿತು ಅನ್ಯೋನ್ಯ ಏನು ನಿರೀಕ್ಷಿಸಲಾಗುತ್ತದೆ?

ಅಡುಗೆ ಮನೆಯ ಪಾತ್ರೆಗಳು, ಕತ್ತಿ, ಚಮಚ ಇತ್ಯಾದಿ ಸಾಮಾನುಗಳನ್ನು ಒದಗಿಸುವುದು ಮಾತ್ರವಲ್ಲ, (ಪ್ರವಾದಿಚರ್ಯೆ ಪ್ರಕಾರ) ಬೆಡ್‌ರೂಮ್ ಫರ್ನಿಚರ್ ಇತ್ಯಾದಿಗಳನ್ನು ಒದಗಿಸುವುದು ಸಹ ಹುಡುಗಿಯ ಕಡೆಯವರ ಜವಾಬ್ದಾರಿ ಎಂದೂ ಉಳಿದ ಇತರ ಸಾಮಾನುಗಳು (ಮೇಜು, ಕುರ್ಚಿ, ಸೋಫಾ, ವಿದ್ಯುಚ್ಚಾಲಿತ ಉಪಕರಣಗಳು ಇತ್ಯಾದಿ) ಹುಡುಗನ ಕಡೆಯವರ ಜವಾಬ್ದಾರಿ ಎಂದೂ ಸಾಮಾನ್ಯವಾಗಿ ನಿರೀಕ್ಷಿಸಲಾಗುತ್ತದೆ. ಈ ವ್ಯವಸ್ಥೆಯಿಂದ ಯಾವುದೇ ರೀತಿಯ ನಿರಾಕರಣೆ ಸ್ವಂತ ಇಚ್ಛೆಯಿಂದ ಆಗಿರಬೇಕು. ಈ ವಿಷಯದಲ್ಲಿ ಒಂದು ಪಕ್ಷ ಮತ್ತೊಂದು ಪಕ್ಷದ ಮೇಲೆ ಯಾವುದೇ ರೀತಿಯ ಒತ್ತಡ ಹೇರುವಂತಿಲ್ಲ. ಯಾವುದಾದರೂ ಪಕ್ಷಕ್ಕೆ ಅವರ ಮೇಲೆ ಅನುಚಿತವಾದ ಒತ್ತಡ ಹೇರಲಾಗಿದೆ ಎಂದು ಅನಿಸಿದೆಯೇ? ಅವರು ಈ ವಿಷಯವಾಗಿ ಸಂತುಷ್ಟರೂ ಸಂತೃಪ್ತರೂ ಆಗಿದ್ದಾರೆಯೇ? ಅವರು

ವಿವಾಹಕ್ಕೆ ಮುಂಚೆ ಈ ಬಗ್ಗೆ ಯಾವುದಾದರೂ ಸಂಗತಿಯನ್ನು ಪರಿಹರಿಸಲು ಇಚ್ಛಿಸಿದ್ದಾರೆಯೇ?

**4. ಹುಡುಗಿಯ ಮನೆಯವರು ಹುಡುಗಿಗೆ ಕೊಡುವ ಉಡುಗೊರೆ:** ಇದು ಹುಡುಗಿ ತನ್ನ ಹೊಸ ಮನೆಗೆ ತರುವಂಥದ್ದಾಗಿದೆ. ಹಝ್ರತ್ ಪೈಗಂಬರ್(ಸ) ತನ್ನ ಮಗಳು ಫಾತಿಮಾರ(ರ) ಮದುವೆ ಮಾಡಿಸಿದಾಗ ಪೈಗಂಬರ್(ಸ) ಮಗಳಿಗೆ ಅಡುಗೆ ಮನೆ ಸಾಮಾನುಗಳನ್ನು ಮತ್ತು ಹಾಸಿಗೆ ಸಾಮಾನುಗಳನ್ನು ಕೊಟ್ಟಿದ್ದರು. ಈ ವಲಯದೊಳಗೆ ಬರುವುದಾಗಿದೆ ಈ ಉಡುಗೊರೆ.

ಅ. ಯಾವುದಾದರೂ ಪಕ್ಷದ ಮೇಲೆ ಅವರು ಸ್ವತಃ ಸರಿಯಲ್ಲವೆಂದು ಗಣಿಸುವ ವಸ್ತುಗಳನ್ನು ಕೊಡಲು ಒತ್ತಡ ಹೇರಲಾಗಿದೆಯೇ? ಉಡುಗೊರೆಯಾಗಿ ಏನು ಕೊಡುವುದಾದರೂ ಸಂಪೂರ್ಣ ಸಮ್ಮತಿಯಿಂದ ಕೊಡಬೇಕು.

ಆ. ಕೊಡಲಾಗುವ ವಧುದಕ್ಷಿಣೆ ಪ್ರಭಾವ ಬೀರಲು ಕೊಡಲಾಗುತ್ತಿದೆಯೇ ಅಥವಾ ಆವಶ್ಯಕತೆ ಪೂರೈಸಲು ಕೊಡಲಾಗುತ್ತಿದೆಯೇ? ಯಾವುದೇ ಕೆಲಸವನ್ನು ತಖ್ವಾ (ಭಯಭಕ್ತಿ) ವನ್ನು ಮುಂದಿರಿಸಿ ಮಾಡುವಾಗ ಮಾತ್ರ ಅಲ್ಲಾಹನ ಅನುಗ್ರಹ ಲಭಿಸುವುದು ಎಂದು ನೆನಪಿಡಿರಿ.

ಇ. ಜೋಡಿಗಳು ಮನೆಯಲ್ಲಿ ನೆಲೆಸುವ ಆವಶ್ಯಕತೆ ಇರುವ ಕಾರಣದಿಂದ ಉಡುಗೊರೆಯನ್ನು ಅಸಾಧಾರಣವಾಗಿ ವರ್ಧಿಸಲಾಗಿದೆಯೇ? ಉಭಯ ಪಕ್ಷಗಳು ಇದರಿಂದ ಸಂತುಷ್ಟರೂ ಸಂತೃಪ್ತರೂ ಆಗಿದ್ದಾರೆಯೇ? ಕೆಲವು ಸಂದರ್ಭಗಳಲ್ಲಿ ವಿವಾಹ ಸ್ವಲ್ಪ ಕಾಲದ ನಂತರ ಮುರಿದು ಹೋಗಲು ಕಾರಣವೇನೆಂದರೆ, ತನ್ನ ಕುಟುಂಬಕ್ಕೆ ಜೀವನಾಧಾರ ಒದಗಿಸಲಾಗದ ದರಿದ್ರನಂತೆ ತನ್ನನ್ನು ತಿಳಿಯಲಾಗಿದೆ; ಆದ್ದರಿಂದ ಉಡುಗೊರೆ ಹೆಚ್ಚು ನೀಡಲಾಗಿದೆ ಎಂದು ಅಳಿಯನಿಗೆ ಅನಿಸುತ್ತದೆ.

ಈ. ಪ್ರಾಯಶಃ ಸಾಂಪತ್ತಿಕ ಅಡೆತಡೆಗಳು, ವಿದೇಶದಿಂದ ಬಂದ ಕಾರಣ ಅಥವಾ ಬೇರೆ ಯಾವುದಾದರೂ ಕಾರಣದಿಂದ ಹುಡುಗಿಯ ಕಡೆಯವರು (ಪ್ರವಾದಿಚರ್ಯೆ ಪ್ರಕಾರದ) ಉಡುಗೊರೆ ಒದಗಿಸಲು ಸಮರ್ಥರಲ್ಲವಾದರೆ, ಈ ಸಂಗತಿಯನ್ನು ಹುಡುಗನ ಕಡೆಯವರು ಅರಿತು ಅಂಗೀಕರಿಸಿದ್ದಾರೆಯೇ? ಈ ಸಂಗತಿ ಅನಂತರ ಅಸಮಾಧಾನಕ್ಕೆ ಕಾರಣ ಆಗುವಂಥದ್ದಾದರೆ ವಿವಾಹ ಕಾರ್ಯವನ್ನು ಮುಂದಕ್ಕೆ ಕೊಂಡುಹೋಗುವುದು ಒಳ್ಳೆಯದಾಗಲಿಕ್ಕಿಲ್ಲ.

### 5. ಪರಸ್ಪರ ಕರ್ತವ್ಯ ನಿರ್ವಹಣೆಯ ನಿರೀಕ್ಷೆ:

ಅ. ಉಭಯ ಪಕ್ಷಗಳ ನಡುವೆ ಇದರ ಬಗ್ಗೆ ಮಾತು ಕೊಟ್ಟಿದ್ದರೆ ಇದರ ಕುರಿತು ಈಗ ಆಲಿಸುವುದು ಮತ್ತು ತಿಳಿದುಕೊಳ್ಳುವುದು ಒಳ್ಳೆಯದು. ಹುಡುಗಿಯಿಂದ ಏನು ನಿರೀಕ್ಷಿಸಲಾಗಿದೆ? ಅವಳು ಮನೆಗೆಲಸ, ಅಡುಗೆ ತಯಾರು ಮಾಡುವುದು, ಮನೆಯನ್ನು ಶುಚಿಯಾಗಿಡುವುದು ಇತ್ಯಾದಿ ಕೆಲಸಗಳು ಮಾಡುವಳೇ? ಹುಡುಗನಿಂದ ಏನು ನಿರೀಕ್ಷಿಸಲಾಗಿದೆ? ಕೆಲಸಕ್ಕೆ ಹೋಗುವುದು, ಮನೆಗೆಲಸದಲ್ಲಿ ನೆರವು ನೀಡುವುದು ಇತ್ಯಾದಿ. ಉಭಯ ಪಕ್ಷಗಳು ತಮ್ಮ ತಮ್ಮ ಪಾತ್ರಗಳಲ್ಲಿ ಸಂತುಷ್ಟರೇ? ಜಗಳಕ್ಕೆ ಕಾರಣವಾಗಬಹುದಾದ ಯಾವುದಾದರೂ ಸಂಗತಿ ಇದೆಯೇ? ಉದಾ: ಮನೆಯಲ್ಲಿ ಯೋಗ್ಯರಾದ ಸಹೋದರ – ಸಹೋದರಿಯರಿದ್ದೂ ಮನೆಯಲ್ಲಿರುವ ಎಲ್ಲರಿಗೂ ಅಡುಗೆ ತಯಾರು ಮಾಡಬೇಕೆಂದೂ ಬಟ್ಟೆ ಒಗೆಯಬೇಕೆಂದೂ ನಿರೀಕ್ಷಿಸುವುದು. ಅದೇ ರೀತಿಯಲ್ಲಿ ರಜಾಕಾಲದಲ್ಲಿ ಹೆಂಡತಿಯನ್ನು ವರ್ಷದಲ್ಲಿ ಎರಡು ಸಲ ವಿಹಾರಕ್ಕೆ (ಸುತ್ತಾಡಲು) ವಿದೇಶಕ್ಕೆ ಕರಕೊಂಡು ಹೋಗಬೇಕೆಂದು ಹುಡುಗನಿಂದ ನಿರೀಕ್ಷಿಸುವುದು.

ಆ. ತನ್ನ ಹೊಸ ಮನೆಯ ಯಾವುದಾದರೂ ರೋಗಿಯನ್ನು ನೋಡಿಕೊಳ್ಳಬೇಕೆಂದು ಪ್ರತೀಕ್ಷಿಸಲಾಗುತ್ತಿದೆ ಎಂದು ಹುಡುಗಿಗೆ ತಿಳಿದಿದೆಯೇ? ಪ್ರಾಯಶಃ ನರ್ಸಿನ ಹಾಗೆ. ಹುಡುಗಿಯ ಕುಟುಂಬ ಯಾವುದಾದರೂ ಸಂಕಷ್ಟದಲ್ಲಿ ಸಿಲುಕಿದರೆ ಅಥವಾ ಯಾವುದಾದರೂ

ಅನಿರೀಕ್ಷಿತ ಆಪತ್ತು ಬಂದೆರಗಿದರೆ ಅವರ ನೆರವು ಮಾಡಬೇಕೆಂದು ಹುಡುಗನಿಂದ ಪ್ರತೀಕ್ಷಿಸಲಾಗುತ್ತಿದೆ ಎಂದು ಹುಡುಗನಿಗೆ ತಿಳಿದಿದೆಯೇ?

**ವೈಯಕ್ತಿಕ ವಿಷಯಗಳ ಕುರಿತು ವಿಶದೀಕರಣೆ**

1. ಉಭಯ ಪಕ್ಷಕ್ಕೂ ಪರಸ್ಪರ ಈ ಕೆಳಗಿನ ವೈಯಕ್ತಿಕ ವಿಷಯಗಳ ಬಗ್ಗೆ ಅರಿವಿದೆಯೇ?

ಅ. ಆರೋಗ್ಯ: ಇಬ್ಬರೂ ಪರಸ್ಪರ ಯಾವುದಾದರೂ ಸ್ಥಾಯಿಯಾಗಿ ಅವರಿಗೆ ಇದ್ದ ಅಥವಾ ಈಗಲೂ ಇರುವ ಆರೋಗ್ಯಪರವಾದ ಸಮಸ್ಯೆಗಳ ಕುರಿತು ತಿಳಿಸಲಾಗಿದೆಯೇ? ಉದಾ: ಅಪಸ್ಮಾರ (ಅದು ಈಗ ಮದ್ದು ಸೇವಿಸುವುದರಿಂದ ನಿಯಂತ್ರಣದಲ್ಲಿ ಇದ್ದರೂ), ಯಾವುದಾದರೂ ಸ್ಥಾಯಿಯಾದ ರೋಗ ಉದಾ: ಖಿನ್ನತೆ, ಥೈರಾಯ್ಡ್, ಮಧುಮೇಹ, ಮಾನಸಿಕ ರೋಗಗಳು ಇತ್ಯಾದಿ. ಇಂತಹ ಸಂಗತಿಗಳು ಪ್ರಾಮಾಣಿಕವಾಗಿ ಹೇಳದಿದ್ದರೆ ವಿವಾಹಗಳು ಬಹಳ ಕಠಿಯಾದ ರೀತಿಯಲ್ಲಿ ಮುರಿದು ಹೋಗುತ್ತದೆ ಎಂದು ನೆನಪಿಡಬೇಕು.

ಆ. ಮುಂಚಿನ ವಿವಾಹಗಳು, ಪತ್ನಿಯರು, ಮುಂಚಿನ ಮಕ್ಕಳು, ನಿಶ್ಚಿತಾರ್ಥಗಳು ಇತ್ಯಾದಿ.

ಇ. ವೈಯಕ್ತಿಕ ಚಟಗಳು – ಉದಾ: ಗತಕಾಲದಲ್ಲಿ ಶರಾಬು ಅಥವಾ ಮಾದಕದ್ರವ್ಯಗಳ ಸೇವನೆ. ಹಿಂದೆ ಇಂತಹ ಚಟಗಳು ಇದ್ದೂ ಇತರ ವ್ಯಕ್ತಿಗಳಿಗೆ ಇದರ ಅರಿವಿದ್ದರೆ ತನ್ನ ಭಾವಿ ಸಂಗಾತಿಗೆ ಇದರ ಕುರಿತು ಸ್ಪಷ್ಟವಾದ ರೀತಿಯಲ್ಲಿ ಹೇಳುವುದು ಒಳಿತು. ಈ ಸಂಗತಿಗಳು ಅನಂತರ ಮುಂದೆ ಬರುವುದಾದರೆ ವಿಶ್ವಾಸದ ಕೊರತೆ ಮತ್ತು ಸಂಗತಿಗಳನ್ನು ಸ್ಪಷ್ಟವಾಗಿ ಹೇಳದ ಕಾರಣ ವಿವಾಹ ಬಹಳ ಕೆಟ್ಟ ರೀತಿಯಲ್ಲಿ ಮುರಿದು ಹೋಗುತ್ತದೆ.

2. ಕೆಲಸ ಅಥವಾ ಜೀವನಾಧಾರ – ಎಲ್ಲಿ ಮತ್ತು ಏನು ಕೆಲಸ ಮಾಡುತ್ತಿದ್ದೀರಿ ಎಂದು ಸತ್ಯವಾಗಿ ಹೇಳಿರಿ.

3. ಹುಡುಗಿ ಕೆಲಸ ಮಾಡಲು ಇಚ್ಛಿಸುವುದಾದರೆ ಹೇಳಿರಿ.

4. ಮಕ್ಕಳು ಬೇಗ ಅಥವಾ ತಡವಾಗಿ ಆಗುವುದರ ಬಗ್ಗೆ ನಿಮ್ಮ ಇಚ್ಛೆ.

5. ಸಂಗಾತಿಯ ಸಂಬಂಧಿಕರು ಮನೆಗೆ ಬರುವುದರ ಬಗ್ಗೆ ಸಂತುಷ್ಟಿ ಅಥವಾ ಅಸಂತುಷ್ಟಿ.

6. ಜಮಾಅತಿನ ಕೆಲಸದಲ್ಲಿ ಭಾಗವಹಿಸುವುದರ ಬಗ್ಗೆ ಅಸಂತುಷ್ಟಿ ಅಥವಾ ಭಾಗವಹಿಸುವುದರ ಬಗ್ಗೆ ನಿರೀಕ್ಷೆ.

7. ನಮಾಝ್ ಮತ್ತು ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ.

8. ಚಂದಾದ ಪಾವತಿ ಮತ್ತು ಜಮಾಅತ್ ಪರವಾದ ಪಾಲ್ಗೊಳ್ಳುವಿಕೆ.

**6. ವಿವಾಹ ಸಮಾರಂಭ:**

1. ವಿವಾಹದ ಸಂದರ್ಭದಲ್ಲಿ ಕೆಲವು ಆಚಾರ – ಅನುಷ್ಠಾನಗಳನ್ನು ಒಂದು ಕುಟುಂಬ ತುಂಬ ಸಾಮಾನ್ಯವೆಂದು ಗಣಿಸಬಹುದು. ಆದರೆ ಇನ್ನೊಂದು ಕುಟುಂಬ ಅದೇ ಆಚಾರಗಳನ್ನು ತಪ್ಪೆಂದು ಭಾವಿಸಬಹುದು. ಉದಾ: ಒಂದು ಕುಟುಂಬದ ಕಡೆಯಿಂದ ಇನ್ನೊಂದು ಕುಟುಂಬದ ಮನೆಯ ಎಲ್ಲರಿಗೂ ಕೊಡುಗೆಗಳನ್ನು ಕೊಡುವುದು.

2. ವಿವಾಹದ ಕಾರ್ಯಕ್ರಮವಾದ ವಲೀಮ ಇತ್ಯಾದಿಗಳಲ್ಲಿ ಯಾರನ್ನೆಲ್ಲ ಆಮಂತ್ರಿಸಲಾಗುವುದು.

3. ಬಾರಾತ್ (ಹುಡುಗನ ಕಡೆಯಿಂದ ವಿವಾಹದ ಸಂಘ ಹೊರಡುವುದು.)

## 7. ವಿವಾಹ ವೇಳೆಯಲ್ಲಿ ನೀಡಲಾಗುವ ಆಭರಣಗಳು:

ವಿವಾಹದ ವೇಳೆಯಲ್ಲಿ ಕೊಡಲಾಗುವ ಆಭರಣಗಳು ಸಾಮಾನ್ಯವಾಗಿ ವಿವಾಹದ ಒಡಂಬಡಿಕೆಯಲ್ಲಿ ಒಳಪಟ್ಟದೆಂದು ಗಣಿಸಲಾಗುತ್ತದೆ – ಮುಂಚೆಯೇ ಇದರ ಬಗ್ಗೆ ಪ್ರಸ್ತಾಪಿಸಲಾಗಿದ್ದರೆ ಹೊರತು. ಈ ಸಂಗತಿಗಳನ್ನು ಸರಿಯಾಗಿ ತಿಳಿದಿರಬೇಕು. ಇಲ್ಲದಿದ್ದರೆ ಒಂದು ವೇಳೆ ವಿವಾಹ ಸಂಬಂಧ ಮುರಿದರೆ ಈ ವಸ್ತುಗಳನ್ನು ಹಿಂತಿರುಗಿಸಬೇಕಾಗುತ್ತದೆ. ಆದರೆ ವಿವಾಹ ಸಂಬಂಧ ಸ್ಥಾಪಿಸಲ್ಪಟ್ಟರೆ ಈ ಆಭರಣಗಳು ಹೆಂಡತಿಯದ್ದಾಗುತ್ತವೆ ಮತ್ತು ಅವಳು ಅವುಗಳನ್ನು ಹೇಗೆ ಬೇಕಾದರೂ ಉಪಯೋಗಿಸಬಹುದು.

### ವಿವಾಹದ ಉಡುಗೊರೆಗಳು:

ವಿವಾಹ ವೇಳೆಯಲ್ಲಿ ಕೊಡಲಾಗುವ ಕೊಡುಗೆಗಳು ಕೊಡುಗೆಗಳೇ ಆಗುವುವು. ಅವು ಪಡೆಯುವವರ ಸೊತ್ತಾಗುವುವು. ಪಡೆಯುವವನು ಅವುಗಳನ್ನು ತನ್ನಿಷ್ಟ ಪ್ರಕಾರ ಉಪಯೋಗಿಸಬಹುದು. ಮಾವನ ಮನೆಯವರ ಕಡೆಯಿಂದ ಲಭಿಸುವ ಕೊಡುಗೆಗಳ ಪ್ರಾಮುಖ್ಯತೆ ವ್ಯಕ್ತಪಡಿಸಲು ಅವುಗಳನ್ನು ಪ್ರತ್ಯೇಕಿಸುವುದು ಒಳಿತು. ಅತ್ತೆ ಕಡೆಯಿಂದ ಲಭಿಸಿದ ಉಡುಗೆ ಅಥವಾ ಕೊಡುಗೆ ನಿಮ್ಮ ಇಷ್ಟ ಪ್ರಕಾರದ್ದಲ್ಲವಾದರೂ ಅದನ್ನು ನೀವು ಕನಿಷ್ಠ ಒಂದು ಸಲ ಧರಿಸಿ ತೋರಿಸಬೇಕು. ಅದೇ ರೀತಿ ಹುಡುಗಿಯ ಕಡೆಯವರಿಂದ ಹುಡುಗಿಗೆ ಲಭಿಸಿದ ವಸ್ತ್ರಗಳನ್ನು ಜನರ ಮುಂದೆ ಕನಿಷ್ಠ ಒಂದು ಸಲ ಧರಿಸಬೇಕು. ಇನ್ನೊಂದು ಕುಟುಂಬಕ್ಕೆ ನಿಮ್ಮ ಎಲ್ಲ ಇಷ್ಟ – ಅನಿಷ್ಟಗಳ ಅರಿವು ಮೊದಲೇ ಇರಬೇಕೆಂಬುದು ಯಾವಾಗಲೂ ಸಾಧ್ಯವಲ್ಲ. ಅವರು ತಮಗಾಗುವಷ್ಟು ಮಟ್ಟಿಗೆ ಪ್ರಯತ್ನಿಸಿದ್ದಾರೆ. ಈ ಪ್ರಯತ್ನಕ್ಕೆ ಬೆಲೆ ಕೊಡದಿರುವುದು ಆರಂಭದಲ್ಲಿಯೇ ಕೆಟ್ಟ ಪ್ರಭಾವ ಉಂಟು ಮಾಡುವುದು. ಮನಸ್ಸಾರೆ ಈ ವಸ್ತುಗಳನ್ನು ಉಪಯೋಗಿಸಿರಿ. ನೀವು ಕೃತಜ್ಞರು ಎಂದು ಅವರು ಕಾಣಲಿ.

**8. ಹನಿಮೂನ್:**

1. ಮೊದಲೇ ಗೊತ್ತು ಮಾಡಲಾಗಿದೆಯೇ ಅಥವಾ ಅನಿರೀಕ್ಷಿತವಾಗಿರುವುದೋ? ಹೇಗಿದ್ದರೂ ಹನಿಮೂನ್‌ಗೆ ಹೋಗದಿರುವುದು ಸರ್‌ಪ್ರೈಸ್ ಆಗದಿರಲಿ. ಹೋಗುವುದು ಕಷ್ಟಸಾಧ್ಯವೆಂದಾದರೆ ಮೊದಲೇ ಈ ಸಂಗತಿಯನ್ನು ವ್ಯಕ್ತಪಡಿಸಬೇಕು. ಇದರಲ್ಲಿ ಯಾವುದೇ ರೀತಿಯ ಸಂಕೋಚಪಡಬೇಕಾಗಿಲ್ಲ. ಈ ಸಂಗತಿಗಳಲ್ಲಿ ವ್ಯಕ್ತತೆಯ ಕೊರತೆಯ ಕಾರಣ ಭಾವಿಯಲ್ಲಿ ಕಷ್ಟ ಅನುಭವಿಸಬೇಕಾಗುತ್ತದೆ.

2. ವಿದೇಶಕ್ಕೆ ಹೋಗುವುದಾದರೆ ಪಾಸ್‌ಪೋರ್ಟ್ ಇತ್ಯಾದಿ ಸರಿಯಾಗಿದೆಯೇ ಎಂದು ನೋಡಬೇಕು. ಹುಡುಗಿಗೆ ವಿದೇಶಕ್ಕೆ ಹೋಗುವುದರ ಕುರಿತು ತಿಳಿಯದಿರುವಾಗ ಅವಳು ಮುಂಚಿತವಾಗಿಯೇ ಅದರ ಏರ್ಪಾಟು ಮಾಡುವಳು ಎಂದು ಹುಡುಗ ಪ್ರತೀಕ್ಷಿಸಬಾರದು.

**9. ತಂದೆ – ತಾಯಿಯೊಂದಿಗೆ ಹುಡುಗನ ವಾಸ:**

***1. ಮೊದಲ ಕೆಲವು ದಿವಸಗಳು:***

ಅ. ಹುಡುಗಿ ಅತಿಥಿ ಆಗಿರುತ್ತಾಳೆ ಮತ್ತು ಒಳ್ಳೆಯ ರೀತಿಯಲ್ಲಿ ಅವಳ ಕಾಳಜಿ ವಹಿಸಬೇಕು.

ಆ. ಈಗಲೇ ಅವಳು ಮನೆಗೆಲಸ ಮಾಡಬೇಕು ಎಂದು ಪ್ರತೀಕ್ಷಿಸಬಾರದು.

ಇ. ಮನೆಯವರೆಲ್ಲರೂ ಅವಳನ್ನು ಉತ್ತಮ ರೀತಿಯಲ್ಲಿ ಸ್ವಾಗತಿಸಬೇಕು.

ಈ. ಹುಡುಗಿ ಈಗ ತಾನೆ ತನ್ನ ಮನೆಯ ಆರಾಮದಾಯಕ ವಾತಾವರಣ ಬಿಟ್ಟಿರುತ್ತಾಳೆ. ದುಃಖ ಮತ್ತು ತಂದೆ – ತಾಯಿಯಿಂದ ದೂರವಾದ ನೋವು ಇರಬಹುದು. ಇದನ್ನು ಅರಿತಿರಬೇಕು ಮತ್ತು

ಸಹಾನುಭೂತಿ ಇರಿಸಬೇಕು. ಈ ಸಂದರ್ಭದಲ್ಲಿ ಸಹಾನುಭೂತಿ ತೋರಿಸದಿರುವುದರಿಂದ ಗಂಡನ ಮನೆಯವರು ಕಠಿಣ ಹೃದಯ ಹೊಂದಿರುವವರು ಮತ್ತು ದಯೆಯಿಲ್ಲದವರು ಎಂಬ ಅನುಭವ ಉಂಟು ಮಾಡುತ್ತದೆ. ಆದ್ದರಿಂದ ಈ ಸಂಗತಿಯನ್ನು ಖಂಡಿತ ಗಮನಿಸಬೇಕು.

ಉ. ಹುಡುಗಿ ಮನೆಗೆಲಸ ಮಾಡಬೇಕೆಂದು ಗಂಡನ ಹೊರತು ಬೇರೆ ಯಾರೂ ಹೇಳಬಾರದು. ಅತ್ತೆ ಮತ್ತು ಗಂಡನ ಸಹೋದರಿಯರು ಇದರ ಬಗ್ಗೆ ವಿಶೇಷ ಗಮನ ವಹಿಸಬೇಕು. ಇದು ಸಹ ಮಾತುಕತೆಯ ರೀತಿಯಲ್ಲಿ ಹೇಳಬೇಕು, ಕಠಿಣವಾದ ರೀತಿಯಲ್ಲಿ ಮತ್ತು ದರ್ಪದಿಂದ ಹೇಳಬಾರದು. ನೆನಪಿಡಿರಿ, ಹುಡುಗಿಯನ್ನು ತನ್ನ ಮನೆಯ ವಾತಾವರಣದಲ್ಲಿ ಮೆಲ್ಲಮೆಲ್ಲನೆ, ಯುಕ್ತಿಯಿಂದ ಮತ್ತು ಸೌಮ್ಯವಾಗಿ ಸೇರಿಸಬೇಕು. ಒತ್ತಾಯದಿಂದ ಮನೆಯ ಸದಸ್ಯೆಯನ್ನಾಗಿ ಮಾಡಲಿಕ್ಕೆ ಯತ್ನಿಸಬಾರದು.

ಊ. ಮನೆಯ ಎಲ್ಲರೂ ಮನೆಯ ಮೇಲ್ನೋಟದಲ್ಲಿ ಭಾಗವಹಿಸುವ ರೀತಿಯಲ್ಲಿ ಮನೆಗೆಲಸವನ್ನು ನ್ಯಾಯಯುತವಾಗಿ ಹಂಚಬೇಕು. ಹುಡುಗಿ ಗುಲಾಮಳಾಗಿ ಅಥವಾ ಸೇವಕಿಯಾಗಿ ಮನೆಗೆ ಬಂದಿರುವುದಿಲ್ಲ.

### *2. ಹೊಸ ಅಭ್ಯಾಸಗಳು ಮತ್ತು ರೀತಿಗಳು:*

ವಿವಿಧ ಕುಟುಂಬದಲ್ಲಿ ವಿವಿಧ ರೀತಿ – ನೀತಿಗಳು ಇರುತ್ತವೆ ಎಂಬುದನ್ನು ಅರಿತಿರಬೇಕು ಮತ್ತು ಇದರ ಕಾಳಜಿ ವಹಿಸಬೇಕು. ಅವರ ರೀತಿ – ನೀತಿಗಳು ನಿಮಗಿಂತ ಭಿನ್ನವಾಗಿದ್ದರೆ ನೀವು ನಿಮ್ಮ ರೀತಿಗಳನ್ನು ಅವರ ಮೇಲೆ ಒತ್ತಾಯದಿಂದ ಹೇರಬೇಡಿರಿ. ಅವರ ವಿಧಿ – ವಿಧಾನವನ್ನು ಗೇಲಿಮಾಡಬೇಡಿರಿ. ಯಾವಾಗಲೂ ಆದರದಿಂದ, ಬುದ್ಧಿಪೂರ್ವಕವಾಗಿ ಮತ್ತು ಯುಕ್ತಿಯಿಂದ ವರ್ತಿಸಬೇಕು.

### *3. ಪ್ರತಿ ಮನೆಯ ಸಂಬಂಧದಲ್ಲಿ ವ್ಯತ್ಯಾಸವಿರುತ್ತದೆ:*

ಪ್ರತಿ ಮನೆಯ ಪರಸ್ಪರ ಸಂಬಂಧದಲ್ಲಿ ವ್ಯತ್ಯಾಸವಿರುತ್ತದೆ. ಒಂದು ಮನೆಯಲ್ಲಿ ಎಲ್ಲ ತೀರ್ಮಾನಗಳನ್ನು ತಾಯಿ ಮಾಡುತ್ತಿರಬಹುದು. ಬೇರೆ ಮನೆಯಲ್ಲಿ ಹಿರಿಯ ಮಗ ಅಥವಾ ತಂದೆ ಮುಂತಾದವರು. ಒಂದು ಮನೆಯಲ್ಲಿ ಯಾವುದಾದರೂ ವಿಶೇಷವಾದ ತೀರ್ಮಾನ ಒಬ್ಬ ವ್ಯಕ್ತಿ ಮಾತ್ರ ಮಾಡುತ್ತಿರಬಹುದು. ಗಂಡ–ಹೆಂಡತಿಯರು ಈ ಸಂಗತಿಯನ್ನು ಪ್ರಾರಂಭಿಕ ದಿವಸಗಳಲ್ಲಿ ಗುರುತಿಸಬೇಕು ಮತ್ತು ಅರಿತಿರಬೇಕು. ಅನಂತರ ಅದನ್ನು ಗೌರವಿಸಬೇಕು. ತಮ್ಮ ವಿಧಿ – ವಿಧಾನಗಳನ್ನು ಇತರರ ಮೇಲೆ ಚಲಾಯಿಸಲು ಪ್ರಯತ್ನಿಬೇಡಿರಿ. ವಿವಾಹ ದೃಢವಾಗಿ ಸ್ಥಾಪಿಸಲ್ಪಟ್ಟ ನಂತರ ಅದಕ್ಕೆಲ್ಲ ಸಾವಕಾಶ ಸಿಗುವುದು. ಈ ಉಪದೇಶ ಗಂಡ – ಹೆಂಡತಿ ಇಬ್ಬರಿಗೂ ಆಗಿದೆ.

***4. ಮನೆಯವರ ಪ್ರತೀಕ್ಷೆಗಳು:*** ಅ. ಆರಂಭ ದಿವಸಗಳಲ್ಲಿ ಹುಡುಗಿ ಮದುಮಗಳ ಹಾಗೆ ಇರಬೇಕು ಮತ್ತು ಹುಡುಗ ಮದುಮಗನ ಹಾಗೆ ಇರಬೇಕು. ಹುಡುಗಿ ಬೆಳಗ್ಗೆ ತಯಾರಾಗಿ ಒಳ್ಳೆಯ ಬಟ್ಟೆ ಉಟ್ಟುಕೊಳ್ಳಬೇಕು. ಹುಡುಗ ಅಳಿಯನ ಪಾತ್ರ ವಹಿಸುತ್ತಾ ಹೆಂಡತಿಯ ಮನೆಯವರೊಂದಿಗೆ ಗೌರವಾದರದಿಂದ ವರ್ತಿಸಬೇಕು.

ಆ. ಮರು ಪಕ್ಷದಿಂದ ಕೊಡಲಾಗುವ ಕೊಡುಗೆಗಳನ್ನು ಗೌರವ ದೃಷ್ಟಿಯಿಂದ ಕಾಣಬೇಕು. ಕೊಡುಗೆಗಳಿಗೆ ಬೆಲೆ ಕೊಡುವುದು ಉತ್ತಮವಾದ ನೈತಿಕ ಗುಣವಾಗಿದೆ. ಹೆಂಡತಿಯ ಮನೆಯವರಿಂದ ಸಿಕ್ಕಿದ ಖಮೀಸ್ (ನಿಲುವಂಗಿ) ಅಥವಾ ಹಾರವನ್ನು ಧರಿಸುವುದು ಉತ್ತಮ ನೈತಿಕ ಗುಣವೂ ಬಹಳ ಒಳ್ಳೆಯ ಪ್ರಭಾವ ಬೀರುವ ಸಂಗತಿಯೂ ಆಗಿದೆ.

ಇ. ಸೊಸೆ ತನ್ನ ಗಂಡನ ತಂದೆ – ತಾಯಿಯನ್ನು ಗೌರವಿಸಬೇಕು. ಮಗನು ಸಹ ತನ್ನ ತಂದೆ – ತಾಯಿಯನ್ನು ಗೌರವಿಸುತ್ತಾ ಇರಬೇಕು. ಮದುಮಗಳ ಬರುವಿಕೆಯಿಂದ ಇದರಲ್ಲಿ ಕೊರತೆ ಉಂಟಾಗಬಾರದು.

ಇಬ್ಬರೂ ಪರಸ್ಪರರ ತಂದೆ-ತಾಯಿಯೊಂದಿಗೆ ಸಹೃದಯತೆ ಮತ್ತು ಗೌರವದಿಂದ ವರ್ತಿಸಬೇಕು ಎಂದು ಪ್ರತೀಕ್ಷಿಸಲಾಗುತ್ತದೆ.

### *5. ಗಾರ್ಹಿಕ ಒತ್ತಡಗಳು:*

ಅ. ಹಲವು ಸಂದರ್ಭಗಳಲ್ಲಿ ಉಭಯ ಪಕ್ಷದ ತಂದೆ-ತಾಯಂದರಿಗೆ ತಮ್ಮ ಮಕ್ಕಳನ್ನು ಕಳೆದುಕೊಂಡ ನೋವು ಖಂಡಿತ ಆಗುತ್ತಿರುತ್ತದೆ. ಇದಕ್ಕೆ ಕಾರಣವೇನೆಂದರೆ, ಅವರ ಮಕ್ಕಳು ಈಗ ಅವರದ್ದು ಮಾತ್ರವಲ್ಲ, ಬದಲಾಗಿ ಇತರರೊಂದಿಗೆ ಸಹ ಸಂಬಂಧ ಹೊಂದಿದ್ದಾರೆ ಎಂಬುದಾಗಿದೆ. ಇದು ನಿರೀಕ್ಷಿತ ಸಂಗತಿಯಾಗಿದೆ ಮತ್ತು ಇದನ್ನು ಅರಿತಿರಬೇಕು. ಇದನ್ನು ಕಾಣುವಾಗ ದುಃಖ ಮತ್ತು ಕೋಪ ಬರಬಾರದು, ಬದಲಾಗಿ ಸಹನೆದೋರಬೇಕು. ವ್ಯಕ್ತಿಯೂ ಸ್ವತಃ ಕುಟುಂಬದ ಅಂಗವಾಗಿ ಇರುವುದೇ ಇದನ್ನು ಕೊನೆಗೊಳಿಸುವ ಅತ್ಯುತ್ತಮ ಮಾರ್ಗವಾಗಿದೆ. ಇದು ಗಂಡ – ಹೆಂಡತಿ ಇಬ್ಬರಿಗೂ ಆವಶ್ಯವಾಗಿದೆ.

ಆ. ಸಾಧಾರಣವಾಗಿ ಗಂಡನ ಸಹೋದರಿಯರೊಂದಿಗೆ ವ್ಯವಹರಿಸುವುದು ಕಷ್ಟ ಸಾಧ್ಯ. ಏಕೆಂದರೆ ತಮ್ಮ ಸಹೋದರನನ್ನು ಬೇರೆಯವರೊಂದಿಗೆ ಕಾಣುವುದು ಅತೃಪ್ತಿಕರವಾಗಿರುತ್ತದೆ. ಸಾಧ್ಯವಾಗುವಷ್ಟು ಮಟ್ಟಿಗೆ ಈ ಸಂಗತಿಯನ್ನು ಕಡೆಗಣಿಸಬೇಕು. ಅವರೊಂದಿಗೆ ಗೆಳೆತನ ಮಾಡಲಿಕ್ಕೆ ಶ್ರಮಿಸಬೇಕು. ಅವರಿಗೆ ಮತ್ತು ನಿಮಗೆ ಸಮಾನವಾಗಿ ಪ್ರಿಯವಾಗಿರುವ ಸಂಗತಿಗಳನ್ನು ಕಂಡುಕೊಳ್ಳಬೇಕು. ಅವುಗಳ ಮೂಲಕ ಗೆಳೆತನ ಬೆಳೆಸಬೇಕು.

### *6. ಪರಸ್ಪರರಿಂದ ಪ್ರತೀಕ್ಷೆಗಳು:*

ಅ. ವಿಶ್ವಾಸಾರ್ಹತೆ: ಈಗ ಬಾಳ ಸಂಗತಿಯ ಆಗಮನವಾಗಿದೆ. ಪರಸ್ಪರರ ರಹಸ್ಯ ಮತ್ತು ಗುಪ್ತವಾದ ಸಂಗತಿಯನ್ನು ಗೋಪ್ಯವಾಗಿಯೇ ಇಡಬೇಕು. ಅಂದರೆ, ಈಗ ತಂದೆ – ತಾಯಿ, ಸಹೋದರ –

ಸಹೋದರಿಯರಿಗಿಂತ ಬಾಳಸಂಗತಿ ವಿಶ್ವಾಸಕ್ಕೆ ಅರ್ಹರು. ಈ ಭರವಸೆ ಎಂದೂ ಮುರಿಯಬಾರದು.

ಆ. ಗೌರವ: ನಿಮ್ಮ ಇಷ್ಟ - ಅನಿಷ್ಟಗಳನ್ನು, ಆಸಕ್ತಿ – ನಿರಾಸಕ್ತಿಗಳನ್ನು ಗೌರವಿಸುವುದು ನಿಮ್ಮ ಸಂಗಾತಿಯ ಕರ್ತವ್ಯವಾಗಿದೆ. ಅದೇ ರೀತಿ ನಿಮಗೂ ಇದೇ ಕರ್ತವ್ಯವಿದೆ. ನೀವು ಒಂದಾಗುತ್ತಿರುವ ಎರಡು ವಿಭಿನ್ನ ವ್ಯಕ್ತಿಗಳಾಗಿದ್ದೀರಿ. ಪರಸ್ಪರರ ಆಸಕ್ತಿಗಳನ್ನು ಒಂದಾಗಿಸಲು ತುಂಬಾ ಸಮಯ ಬೇಕಾಗಬಹುದು.

ಇ. ಪರಸ್ಪರರನ್ನು ಮನವರಿಕೆ ಮಾಡುವುದು: ಗಂಡ – ಹೆಂಡತಿಯರು ಪರಸ್ಪರರ ಕಷ್ಟ – ದುಃಖಗಳನ್ನು ಮನವರಿಕೆ ಮಾಡಬೇಕು. ಅಂದರೆ, ಎರಡು ವ್ಯಕ್ತಿಗಳನ್ನು ಸೇರಿಸುವುದರಿಂದ ಉಂಟಾಗುವ ಅಡತಡೆಗಳನ್ನು ಮನವರಿಕೆ ಮಾಡಬೇಕು. ಪರಸ್ಪರರಿಗೆ ಸರಿಹೊಂದಲು ಮತ್ತು ಬದಲಾಗಲು ಸಂದರ್ಭ ಮತ್ತು ಸಮಯಾವಕಾಶ ಕೊಡುವುದೇ ಪರಸ್ಪರರನ್ನು ಮನವರಿಕೆ ಮಾಡುವುದಾಗಿದೆ. ಉಭಯ ಪಕ್ಷಕ್ಕೆ ಪರಸ್ಪರ ಹೊಂದಿಕೊಳ್ಳಲು ಅಲ್ಪ – ಸ್ವಲ್ಪ ಕಷ್ಟತೆಗಳು ಖಂಡಿತವಾಗಿ ಇರುತ್ತದೆ ಎಂದು ಅರಿತಿರಬೇಕು.

ಈ. ಸಹನೆ: ನಿಮ್ಮ ಉದ್ದೇಶ ಪರಸ್ಪರ ಹೊಂದಾಣಿಕೆಯಾಗಿರುವಾಗ ಪರಸ್ಪರ ತಪ್ಪುಗಳು ಮತ್ತು ಅಡೆ – ತಡೆಗಳಿಗೆ ಕ್ಷಮೆ ಮತ್ತು ಸಹನೆದೋರಬೇಕು. ಕೊನೆಗೊಳಿಸಲು ಬಹಳ ಕಷ್ಟಕರವಾದ ಕೆಲವು ಸಮಸ್ಯೆಗಳು ಇರುತ್ತದೆ. ಉದಾ: ನಿದ್ದೆಯಲ್ಲಿ ಗೊರಕೆ ಹೊಡೆಯುವುದು, ಅಧಿಕವಾಗಿ ಬೆವರುವುದು, ವಿಶಿಷ್ಟವಾದ ರೀತಿಯಲ್ಲಿ ಹಲ್ಲು ಕಡಿಯುವುದು ಇತ್ಯಾದಿ. ಆದ್ದರಿಂದ ಸಹನೆದೊರಬೇಕು ಮತ್ತು ಮನವರಿಕೆ ಮಾಡಬೇಕು. ಆಹಾರ – ಪಾನೀಯಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಇರುತ್ತವೆ. ಉದಾ: ಆಹಾರ ತಯಾರಿಸುವ ರೀತಿ ಇತ್ಯಾದಿ. ಗಂಡನ ಮನೆಯ ಅಡುಗೆಯ ರೀತಿಗೆ ಬೆಲೆ ಕೊಡುವುದಿಲ್ಲವೆಂದು ಹೇಳಿ ತಾತ್ಸರಭಾವದಿಂದ

ದೂಷಿಸಬಾರದು; ಬದಲಾಗಿ, ಇಲ್ಲಿ ಕೂಡ ಸಹನೆ ಮತು ಕ್ಷಮೆಯ ಆವಶ್ಯಕತೆ ಇದೆ.

ಉ. ಗಂಡ – ಹೆಂಡತಿ ಸಂಬಂಧ: ಈ ರೀತಿಯ ವಿಷಯಗಳಲ್ಲಿ ಗಂಡ – ಹೆಂಡತಿ ನಡುವೆ ಮಾತ್ರ ಮಾತುಕತೆ ಸೀಮಿತವಾಗಿರುವುದು ಉತ್ತಮ. ವಿಶೇಷವಾಗಿ ಆರಂಭದ ಕೆಲವು ವಾರಗಳಲ್ಲಿ ಬೇರೆ ವ್ಯಕ್ತಿಗೆ ಇದರಲ್ಲಿ ಮಧ್ಯೆಪ್ರವೇಶಿಸುವ ಆವಶ್ಯಕತೆ ಇಲ್ಲ. ಗಂಡ – ಹೆಂಡತಿ ಈ ಸಮಸ್ಯೆಗಳನ್ನು ತಮ್ಮಲ್ಲಿಯೇ ಬಗೆಹರಿಸಬೇಕು. ಅನುಭವದ ಕೊರತೆಯನ್ನು ಪರಿಗಣನೆ ಮತ್ತು ಸಹಾನುಭೂತಿಯಿಂದ ಪರಿಹರಿಸಿರಿ.

ಊ. ಒಟ್ಟಿಗೆ ಸಮಯ ಕಳೆಯುವುದು: ವಿವಾಹದ ಆರಂಭಿಕ ದಿನಗಳಲ್ಲಿ ಗಂಡ – ಹೆಂಡತಿ ಹೆಚ್ಚಾಗಿ ಒಟ್ಟಿಗೆ ಸಮಯ ಕಳೆಯುವರು ಎಂದೇ ಪ್ರತೀಕ್ಷಿಸಲಾಗುತ್ತದೆ. ಯಾವುದೇ ಬದಲಾವಣೆ ಇಲ್ಲದೆ ಇರುವುದು ಅಸಮಂಜಸವಾಗಿದೆ. ಇದು ಭವಿಷ್ಯದಲ್ಲಿ ಉತ್ತಮ ತಳಪಾಯ ಉಂಟುಮಾಡುವುದಿಲ್ಲ. ಆದರೆ ಅದರೊಂದಿಗೆ ಮನೆಯ ಇತರ ವ್ಯಕ್ತಿಗಳ ಹಕ್ಕುಗಳನ್ನು ಈಡೇರಿಸುವುದು ಆವಶ್ಯಕ.

i. ಕನಿಷ್ಠ ಪಕ್ಷ ಪರಸ್ಪರರ ತಂದೆ – ತಾಯಂದಿರ ಅಥವಾ ಸಹೋದರ – ಸಹೋದರಿಯರ ಹಕ್ಕುಗಳನ್ನು ಈಡೇರಿಸಲು ಬೇಕಾಗುವಷ್ಟು ಬಿಡುವು ಅಥವಾ ಸಮಯ ಕೊಡಬೇಕು. ಉದಾ: ಬೆಳಗಾತ ಅವರನ್ನು ಭೇಟಿಯಾಗುವುದು, ಅವರೊಂದಿಗೆ ಊಟ ಮಾಡುವುದು. ಇದು ಮನೆಯಲ್ಲಿ ಮಾಮೂಲು ಎಂದಾದರೆ ಅದು ನಡೆಯುತ್ತಿರಲಿ. ನೀವು ಅದನ್ನು ತಡೆಯದಿರಿ.

ii. ಮನೆಯ ಇತರ ವ್ಯಕ್ತಿಗಳ ಸುಖ – ಕ್ಷೇಮ ವಿಚಾರಿಸುತ್ತಿರಬೇಕು. ಅವರನ್ನು ಕಡೆಗಣಿಸಲಾಗಿದೆ ಎಂದು ಅವರಿಗೆ ಅನಿಸದಿರಲಿ.

iii. ತನ್ನ ಮನೆಗೆ ಫೋನ್ ಮಾಡಿ ತಂದೆ – ತಾಯಿಯ ಸುಖ – ಕ್ಷೇಮ ವಿಚಾರಿಸುವುದು, ಅವರಿಗೆ ನಿಮ್ಮ ಸ್ಥಿತಿ – ಗತಿ ಇತ್ಯಾದಿಗಳ ಬಗ್ಗೆ ಹೇಳುವುದು.

iv. ಗೆಳೆಯರೊಂದಿಗೆ ಸಂಪರ್ಕವಿರಿಸುವುದು ಮತ್ತು ನಿಮ್ಮ ಸ್ಥಿತಿ – ಗತಿಗಳ ಬಗ್ಗೆ ತಿಳಿಸುವುದು. ಆದರೆ ಈಗ ಕರ್ತವ್ಯಗಳು ಬದಲಾಗಿವೆ ಎಂದು ತಿಳಿದಿರಬೇಕು. ಈಗ ಗಂಡ – ಹೆಂಡತಿಯರೇ ಎಲ್ಲರಿಗಿಂತ ಮುಖ್ಯ. ಆದ್ದರಿಂದ ಗೆಳೆಯರೊಂದಿಗೆ ಕಳೆಯುವ ಸಮಯವನ್ನು ಕಡಿಮೆ ಮಾಡಬೇಕಾಗುವುದು. ಆದರೆ ಸಂಪೂರ್ಣವಾಗಿ ಸಂಪರ್ಕ ಕಡಿಯುವುದು ಸರಿಯಲ್ಲ.

ಖ. ಮೊದಲಿನ ಕೆಲವು ದಿನಗಳ ನಂತರ: ಈ ದಿನಗಳು ದಾಟಿಹೋಗುವಾಗ ಮತ್ತು ವಿವಾಹದ ಅಪರಿಮಿತ ಸುಖದ ಸ್ಥಿತಿ ಕಳೆಗುಂದುವಾಗ ವ್ಯಕ್ತಿಯೂ ತನ್ನ ಸಂಗಾತಿ ಮತ್ತು ಸಂಗಾತಿಯ ಕುಟುಂಬವನ್ನು ವಿಭಿನ್ನ ರೀತಿ ಮತ್ತು ಹೊಸ ದೃಷ್ಟಿಕೋನದಿಂದ ನೋಡಲು ಶುರು ಮಾಡುತ್ತಾನೆ. ಪ್ರಾಯಶಃ ಮುಂಚೆ ಕಡೆಗಣಿಸಲಾಗುತ್ತಿದ್ದ ಸಂಗತಿಗಳು ಈಗ ವಿಶೇಷ ಮತ್ತು ಮುಖ್ಯವೆಂದು ತೋರುತ್ತವೆ. ನೆನಪಿಡಿರಿ, ಈಗ ಇದು ಹೊಸ ಜೀವನವಾಗಿದೆ. ಇದರಲ್ಲಿ ನೀವು ರಾಜಿ ಮಾಡಬೇಕು. ಕೆಲವು ಬಾರಿ ನೀವು ನಿಮ್ಮ ಹಕ್ಕುಗಳನ್ನು ಬಿಟ್ಟರೆ ಕೆಲವನ್ನು ನಿಮ್ಮ ಸಂಗಾತಿ ಬಿಡಬೇಕು. ಮಧ್ಯಮ ಮಾರ್ಗ ಕೈಗೊಳ್ಳಬೇಕು.

**ಯಾವುದಾದರೂ ಅಡೆ – ತಡೆಗಳು ಎದುರಾದರೆ ಅದನ್ನು ದೂರಮಾಡಲು ಈ ಕೆಳಗಿನ ಸಂಗತಿಗಳನ್ನು ಗಮನದಲ್ಲಿಡಿರಿ:**

1. ಭಯ – ಭಕ್ತಿ (ತಖ್ವಾ)ಯನ್ನು ಯಾವಾಗಲೂ ಮುಂದಿರಿಸಿರಿ, ಎಂದರೆ, ಮಾಡುವ ಕೆಲಸ ಅಲ್ಲಾಹನ ಪ್ರೀತಿಗೆ ಕಾರಣವಾಗುವುದೋ ಅಥವಾ ಕೋಪಕ್ಕೆ ಕಾರಣವಾಗುತ್ತದೋ ಎಂಬ ಸಂಗತಿಗೆ ಯಾವಾಗಲೂ ಆದ್ಯತೆ ಕೊಡಬೇಕು.

2. ಸಂಗಾತಿಯೊಂದಿಗಿನ ಸಮಸ್ಯೆ: ಇವುಗಳನ್ನು ಅನ್ಯೋನ್ಯ ಮಾತುಕತೆ ರೂಪದಲ್ಲಿ ಯುಕ್ತಿ ಮತ್ತು ಸಹನೆಯೊಂದಿಗೆ ಬಗೆಹರಿಸಬಹುದಾಗಿದೆ.

3. ಕುಟುಂಬದ ಸಮಸ್ಯೆ: ಇವುಗಳನ್ನು ಸಹ ಅನ್ಯೋನ್ಯ ಮಾತುಕತೆ ರೂಪದಲ್ಲಿ ಯುಕ್ತಿ ಮತ್ತು ಸಹನೆಯೊಂದಿಗೆ ಬಗೆಹರಿಸಬಹುದಾಗಿದೆ. ಈ ಸಮಸ್ಯೆಯಲ್ಲಿ ಕುಟುಂಬವನ್ನು ಸೇರಿಸದಿರುವುದು ಉತ್ತಮ. ಏಕೆಂದರೆ, ಅವರು ತಮ್ಮ ಯೋಚನೆ ಮತ್ತು ಅರಿವು ಪ್ರಕಾರ ಅವರಿಗೆ ಉತ್ತಮವೆಂದು ತೋಚಿದ್ದನ್ನು ಹೇಳುವರು. ಆದರೆ ನಿಮ್ಮ ಹೊಸ ಜೀವನ ಈಗ ಆರಂಭವಾಗಿದೆಯಷ್ಟೆ ಮತ್ತು ನೀವು ನಿಮ್ಮ ಸಂಯೋಜಿತ ಅಭಿಪ್ರಾಯ ಮತ್ತು ಒಲವು ಮೂಲಕ ತಮ್ಮ ಆಲೋಚನೆ ಮತ್ತು ಅಭ್ಯಾಸಗಳನ್ನು ತಯಾರು ಮಾಡುತ್ತಿರಬಹುದು. ಸಮಸ್ಯೆಗಳಲ್ಲಿ ಕುಟುಂಬದ ಮಧ್ಯಪ್ರವೇಶ ಅನೇಕ ಸಂದರ್ಭಗಳಲ್ಲಿ ವಿವಾಹ ಸಂಬಂಧ ಮುರಿಯಲು ಕಾರಣವಾಗುತ್ತದೆ.

4. ಜಗಳದ ಸಂದರ್ಭ ಕೆಲವೊಮ್ಮೆ ಖಂಡಿತ ಆಗುತ್ತದೆ. ಕೆಲವೊಮ್ಮೆ ಅನೇಕ ಬಾರಿ ಆಗುತ್ತದೆ. ಆದರೆ ಇದಕ್ಕಿಂತ ಮುಖ್ಯವಾದ ಸಂಗತಿ ಏನೆಂದರೆ:

i.ಸಂಗಾತಿಗಳಲ್ಲಿ ಒಬ್ಬರು ಕೋಪಗೊಳ್ಳುವಾಗ ಎರಡನೇ ವ್ಯಕ್ತಿ ಮಾತಾಡುವುದರಿಂದ ಮತ್ತು ಜವಾಬು ಕೊಡುವುದರಿಂದ ಬಿಟ್ಟು ನಿಲ್ಲಬೇಕು.

ii. ಯಾವುದೇ ಅವಸ್ಥೆಯಲ್ಲಿ ಹೊಲಸು ಭಾಷೆಯಲ್ಲಿ ಮಾತಾಡಬೇಡಿರಿ.

iii. ಯಾವತ್ತೂ ಮರು ಪಕ್ಷದ ಕುಟುಂಬದ ವಿಷಯವನ್ನು ಜಗಳದಲ್ಲಿ ಎಳೆಯದಿರಿ (ಎಂದರೆ ನಿಮ್ಮ ತಂದೆ – ತಾಯಿ ಹೀಗೆ ಆಗಿದ್ದಾರೆ ಅಥವಾ ಬೇರೆ ಸಂಬಂಧಿಕರು ಹೀಗೆ..ಇತ್ಯಾದಿ.)

iv. ಎಂದೂ ಹಿಂಸೆ ಮಾಡದಿರಿ (ಎಂದರೆ ವಸ್ತುಗಳನ್ನು ಬಿಸಾಡುವುದು ಅಥವಾ ಯಾವುದಾದರೂ ರೀತಿಯಲ್ಲಿ ಹೊಡೆಯುವುದು

ಇತ್ಯಾದಿ). ಪರಸ್ಪರರ ಗೌರವ ಕಳೆದುಹೋಗಲು ಹಿಂಸಾತ್ಮಕ ರೀತಿ ಕಾರಣವಾಗುತ್ತದೆ.

v. ತರ್ಕವನ್ನು ಆದಷ್ಟು ಬೇಗ ಕೊನೆಗೊಳಿಸಬೇಕು. ವ್ಯಕ್ತಿ ಕ್ಷಮೆ ಕೇಳುವುದರ ಮೂಲಕವೂ ಕೊನೆಗೊಳಿಸಬಹುದಾಗಿದೆ. (ನಿಮ್ಮ ತಪ್ಪಲ್ಲವಾದರೂ, ಮರು ಪಕ್ಷ ಸಮ್ಮತಿಸಲು ತಯಾರಿಲ್ಲವಾದರೂ ಸರಿ. ನೀವು ಮರು ಪಕ್ಷಕ್ಕೆ ಅವರ ಕೋಪ ಕಡಿಮೆಯಾಗುವಾಗ ಮನವರಿಕೆ ಮಾಡಿಕೊಡಬಹುದಾಗಿದೆ.) ಅಥವಾ ಮರುಪಕ್ಷದ ಮಾತಿಗೆ ಜವಾಬು ಕೊಡದಿರಿ.(ಏಕೆಂದರೆ, ಚಪ್ಪಾಳೆ ಎರಡು ಕೈಯಿಂದ ತಟ್ಟಲಾಗುತ್ತದೆ.)

vi. ಜಗಳವನ್ನು ಬಗೆಹರಿಸದೆ ಮಲಗದಿರಿ.

5. ಜಗಳ ನಿರಂತರ ಆಗುತ್ತಿದ್ದರೆ: ಇಂತಹ ಸನ್ನಿವೇಶಗಳು ಕೆಲವು ಸಲ ಉಂಟಾಗುತ್ತವೆ. ಆಗ ಅರಿವುಳ್ಳ ಮನೆಯ ಹಿರಿಯರು ನೆರವಾಗಬಹುದು. ಅವರು ಪಕ್ಷಪಾತ ಮಾಡಬಾರದು. ಕೆಲವು ಬಾರಿ ನಿಮ್ಮ ಸಂಗಾತಿಯ ಸಮಪ್ರಾಯರಾದ ಮತ್ತು ಸಮೀಪಸ್ತರಾದ ಕುಟುಂಬದ ಕಿರಿಯರು ನಿಮಗೆ ನೆರವಾಗಬಹುದು. ಈ ಮಾರ್ಗ ಸಹ ಸಹಾಯಕವಾಗದಿದ್ದರೆ ಹೊರಗಿನಿಂದ ರಹಸ್ಯವಾಗಿ ಸಹಾಯ ಪಡೆಯಿರಿ. ಇಸ್ಲಾಹಿ ಕಮಿಟಿ (ಸುಧಾರಣೆ ಸಮಿತಿ) ಅಥವಾ ಕೌನ್ಸಿಲರ್/ಅಡ್ವೈಸರನ್ನು ಸಂಪರ್ಕಿಸುವುದು ಸಹ ಆವಶ್ಯವಾದುದಾಗಿದೆ. ಎಂದೂ ಪ್ರಾರ್ಥನೆಯ ಶಕ್ತಿಯನ್ನು ಮರೆಯದಿರಿ. (ರಬ್ಬನಾ ಹಬ್‌ಲನಾ ಮಿನ್ ಅಝ್‌ವಾಜಿನಾ...). ಹುಝೂರನ್ನು ಮತ್ತು ಸಜ್ಜನರನ್ನು ದುಆ ಮಾಡಲಿಕ್ಕೆ ಅಪೇಕ್ಷಿಸುವುದು ಸಹ ಆವಶ್ಯಕವಾಗಿದೆ. ಇದು ಸತ್ಫಲಕ್ಕೆ ಕಾರಣವಾಗುವುದು.

6. ಕುಟುಂಬ ರಹಸ್ಯ: ಹೇಗಾದರೂ ಹೊಸ ಜೀವನ ಸಾಗಿಸುವುದು ಗಂಡ – ಹೆಂಡತಿಯ ಕೆಲಸವಾಗಿದೆ. ಪರಸ್ಪರ ಭರವಸೆಯನ್ನು ಎಂದೂ ಕಡಿಯದಿರಿ. ಮನೆಯಲ್ಲಿ ಏನಾಗುತ್ತಿದೆ ಎಂದು ಹೊರಗಿನವರಿಗೆ ಹೇಳದಿರಿ. ವಿಶೇಷವಾಗಿ ಇತರರ ಮುಂದೆ ತಮ್ಮ ಹೊಸ ಸಂಗಾತಿಯ ಕೊರತೆಗಳನ್ನು ಖಂಡಿತ ಪ್ರಸ್ತಾಪಿಸಬೇಡಿರಿ.

**ಇವರಿಂದ ತಮ್ಮನ್ನು ಪಾರಾಗಿಸಿರಿ ಮತ್ತು ಜಾಗರೂಕರಾಗಿರಿ:**

ಅ. ಸ್ಥಿತಿಗತಿಗಳ ಬಗ್ಗೆ ಅರಿಯಲು ಪ್ರಯತ್ನಿಸುವ ಆದರೆ ಅವುಗಳಿಂದ ಕೇವಲ ಮೋಜಾಡಲು ಇಚ್ಛಿಸುವ ಮತ್ತು ಸಹಾಯ ಮಾಡಲು ಇಚ್ಛಿಸದ ಸಂಬಂಧಿಕರಿಂದ ಜಾಗರೂಕರಾಗಿರಿ.

ಆ. ಸಹಾಯ ಮಾಡುವ ಭರವಸೆಕೊಟ್ಟು ನೆರವೇರಿಸದ ಗೆಳೆಯರಿಂದ ದೂರವಿರಿ, ವಿಶೇಷವಾಗಿ ನಿಮ್ಮ ಅಗತ್ಯಕ್ಕನುಸಾರವಾಗಿ.

ಇ. ನಿಮ್ಮಲ್ಲಿ ಏನಾದರೂ ಕೊರತೆ ಹುಡುಕಲಿಕ್ಕಾಗಿ ನಿಮ್ಮ ಹೊಸ ಕುಟುಂಬದ ಕುರಿತು ಅರಿಯಲು ಪ್ರಯತ್ನಿಸುವ ಜನರಿಂದ ಬಿಟ್ಟು ನಿಲ್ಲಿರಿ.

**ತನ್ನ ಸಂಗಾತಿಯೊಂದಿಗೆ ಬೇರೆಯಾಗಿ ಜೀವನ ಸಾಗಿಸುವುದು:**

ನಿಮ್ಮ ಹಿಂದಿನ ಜೀವನದಿಂದ ವಿಭಿನ್ನವಾಗಿರುವ ಈಗಿನ ಜೀವನದ ತಯಾರಿ ಮಾಡಿರಿ.

ಅ. ಈ ಕೆಳಗಿನ ಸಂಗತಿಗಳು ನಿಮ್ಮ ಮನೆಯ ದಿನಚರಿಯಾಗಿರಲಿ:

i. ಒಟ್ಟಿಗೆ ನಿದ್ದೆಯಿಂದ ಏಳಿರಿ ಮತ್ತು ಒಟ್ಟಿಗೆ ಊಟಮಾಡಿರಿ. ಹೆಂಡತಿ ಹಾಸಿಗೆಯಲ್ಲಿ ಮಲಗಿಕೊಂಡಿರುವ ಸ್ಥಿತಿಯಲ್ಲಿ ಗಂಡನು ಒಂಟಿಯಾಗಿಯೇ ಊಟ ತಯಾರು ಮಾಡಿ ತಿನ್ನುವ ಸಂದರ್ಭ ಉಂಟಾಗದಿರಲಿ.

ii. ನಿಮ್ಮಿಬ್ಬರ ಸಮ್ಮತಿ ಇದ್ದರೆ ಗಂಡನ ಬಟ್ಟೆಗಳನ್ನು ಕೆಲಸಕ್ಕೆ ಹೋಗುವ ಮುಂಚೆಯೇ ಇಸ್ತ್ರಿ ಹಾಕಿ ಇಡುವುದರ ಕಡೆಗೆ ಗಮನ ಹರಿಸಿರಿ.

iii. ಮಧ್ಯಾಹ್ನದ ಊಟ ಸಹ ತೆಗೆದುಕೊಂಡು ಹೋಗಲಿಕ್ಕಿದ್ದರೆ ಹಿಂದಿನ ರಾತ್ರಿಯೇ ತಯಾರು ಮಾಡಿ ಇಡಿರಿ ಅಥವಾ ಹೋಗುವ ಮುಂಚಿತವಾಗಿ ತಕ್ಕುದಾದ ಸಮಯದಲ್ಲಿ.

iv. ರಾತ್ರಿಯೂಟ ಮತ್ತು ಮಧ್ಯಾಹ್ನದ ಊಟ (ಮಧ್ಯಾಹ್ನ ಮನೆಗೆ ಬರುವುದಾದರೆ) ಸಮಯಕ್ಕೆ ತಯಾರಾಗಿರಲಿ. ಗಂಡನಿಗೆ ಇಷ್ಟಕರವಾದ ಆಹಾರವನ್ನು ಮಾಡಲು ಪ್ರಯತ್ನಿಸಿರಿ.

v. ಮನೆಗೆಲಸವನ್ನು ಸಹ ಹಗಲು ಸಮಯಗಳಲ್ಲಿ ಮಾಡುತ್ತಿರಿ. ಆವಶ್ಯವಾದ ಎಡೆಯಲ್ಲಿ ಶುಚಿ ಮಾಡುವುದು, ಊಟ ತಯಾರು ಮಾಡುವುದು, ಪಾತ್ರೆಗಳನ್ನು ತೊಳೆಯುವುದು ಇತ್ಯಾದಿ. ತಮ್ಮನ್ನು ತಾವೇ ಯಾವುದಾದರೂ ಕೆಲಸದಲ್ಲಿ ತಲ್ಲೀನಗೊಳಿಸಿರಿ.

vi. ಗಂಡನು ಮನೆಗೆ ಬರುವಾಗ ಹೆಂಡತಿ ಸಹ ತಯಾರಾಗಿರಲಿ ಮತ್ತು ಯೋಗ್ಯವಾದ ಬಟ್ಟೆ ಧರಿಸಿರಲಿ. ಗಂಡನು ಕೆಲಸ ಮಾಡಿ ದಣಿದು ಮನೆಗೆ ಬರುವಾಗ ಹೆಂಡತಿ ರಾತ್ರಿಯುಡುಪಿನಲ್ಲಿಯೇ ಇರುವುದನ್ನು ಕಾಣುವುದು (ಅದು ಸ್ವಚ್ಛವಾದದ್ದು ಆದರೂ) ಮನಸ್ಸಿಗೆ ತೊಂದರೆ ಕೊಡುವ ಸಂಗತಿಯಾಗಿದೆ.

ಆ. ಗಂಡನು ಮನೆಯಿಂದ ಕೆಲಸಕ್ಕೆ ಹೋಗುವಾಗ ಥಟ್ಟನೆ ಒಂಟಿತನದ ಅನುಭವ ಉಂಟಾಗುತ್ತದೆ. ಖಿನ್ನತೆ ಸಹ ತಲೆದೋರಬಹುದು. ನೀವು ಈ ಕೆಳಗಿನ ಮುಂಜಾಗ್ರತೆವಹಿಸಬೇಕು:

i. ಏಕಾಂತದಲ್ಲಿ ಅಧಿಕ ಆಲೋಚನೆ ಮಾಡದಿರಿ. ತಮ್ಮನ್ನು ತಾವು ಯಾವುದಾದರೂ ಕೆಲಸದಲ್ಲಿ ತೊಡಗಿಸಿಡಿರಿ.

ii. ಅಧಿಕ ಸಮಯ ಇಂಟರ್‌ನೆಟ್ ಅಥವಾ ಫೋನ್‌ನಲ್ಲಿ ಕಳೆಯುವುದು ಸಹ ಹಾನಿಕಾರಕ.

iii. ನಿದ್ದೆ ಮಾಡುತ್ತಿರುವುದು ಅಥವಾ ತನ್ನ ಮತ್ತು ಮನೆಯ ಪರಿವೆ ಮಾಡದಿರುವುದು ಸಹ ಸರಿಯಲ್ಲ.

**ಏಕಾಂತದಲ್ಲಿ ಸಮಯದ ಸದುಪಯೋಗ:**

ಅ. ಮನೆಯ ವಿವಿಧ ಕೆಲಸಗಳ ವೇಳಾಪಟ್ಟಿ ಮಾಡಿರಿ. ಅದರ ಪ್ರಕಾರ ಪ್ರತಿಯೊಂದು ಕೆಲಸವನ್ನು ನಿಶ್ಚಿತ ಸಮಯದಲ್ಲಿ ಮುಗಿಸಿರಿ.

ಆ. ಭವಿಷ್ಯದಲ್ಲಿ ಪ್ರಯೋಜನಕಾರಿ ಆಗಬಹುದಾದ ಕೆಲಸಗಳಲ್ಲಿ ತೊಡಗಿಸಿರಿ. (ಉದಾ: ಯಾವುದಾದರೂ ಕೋರ್ಸ್ ಮಾಡುವುದು.)

ಇ. ಗಂಡನಿಗೂ ಒಪ್ಪಿಗೆಯಾದವರೊಂದಿಗೆ ಗೆಳೆತನವಿರಿಸಿರಿ. ಗಂಡನ ಸಮ್ಮತಿ ಇಲ್ಲದವರೊಂದಿಗೆ ಇರಿಸಬೇಡಿರಿ. ಇದು ಇಬ್ಬರಿಗೂ ಕಡ್ಡಾಯ ಮತ್ತು ಇಬ್ಬರ ಕರ್ತವ್ಯವಾಗಿದೆ.

ಈ. ಇಬ್ಬರ ಕುಟುಂಬದವರಿಗೆ ಸಮಯೋಚಿತವಾಗಿ ಫೋನ್ ಮಾಡುತ್ತಿರಿ. ಅವರ ಸ್ಥಿತಿಗತಿಗಳ ಬಗ್ಗೆ ತಿಳಿಯುತ್ತಿರಿ ಮತ್ತು ದುಆ ಪಡೆಯುತ್ತಿರಿ.

ಉ. ಹಝ್ರತ್ ಮಸೀಹ್ ಮೌಊದ್‌ರ[ಅ] ಗ್ರಂಥಗಳ ಅಧ್ಯಯನದ ಮೂಲಕ ತಮ್ಮ ಅರಿವನ್ನು ವರ್ಧಿಸುವುದರಲ್ಲಿ ತಲ್ಲೀನರಾಗಿರಿ. ಇದು ಭವಿಷ್ಯದಲ್ಲಿ ನಿಮ್ಮ ಮಕ್ಕಳಿಗೆ ಒಂದು ಉತ್ತಮ ಮಾದರಿಯಾಗಲು ಸಹಾಯಕವಾಗುವುದು.

ಊ. ಇಬ್ಬರ ತಂದೆ – ತಾಯಂದಿರರೊಂದಿಗೆ ಆಗಿಂದಾಗ್ಗೆ ಮಾತುಕತೆ ನಡೆಸುತ್ತಿರಿ. ಇದನ್ನು ಅನ್ಯೋನ್ಯ ಪ್ರೋತ್ಸಾಹಿಸಬೇಕು. ಇದರಿಂದ ಎಲ್ಲರಿಗೂ ನೆಮ್ಮದಿ ಸಿಗುತ್ತದೆ.

**10. ಹಣಕಾಸು:**

ಕೆಲವು ಸಂದರ್ಭಗಳಲ್ಲಿ ವಿವಾಹ ಸಂಬಂಧಗಳ ಕಡಿತದಲ್ಲಿ ಹಣಕಾಸಿನ ಸಮಸ್ಯೆಗಳು ಮುಂದೆ ಬರುತ್ತವೆ. ಈ ಸಂಗತಿಯನ್ನು ನ್ಯಾಯದಿಂದ ಮತ್ತು ಸೂಕ್ಷ್ಮವಾಗಿ ಕೈಗೊಳ್ಳಬೇಕು.

**ಅ. ಮನೆಯ ವೆಚ್ಚಗಳು:** ಖರ್ಚು – ವೆಚ್ಚಗಳು ಎರಡೂ ಪಕ್ಷಗಳ ಸಮ್ಮತಿ ಮತ್ತು ಸಂತೃಪ್ತಿ ಪ್ರಕಾರ ನಡೆಯುತ್ತಿದೆಯೇ? ಕೆಲವು ಬಾರಿ ಪುರುಷನು ತನ್ನ ಸಂಬಂಧಿಕರಿಗೆ ಸಾಂಪತ್ತಿಕ ನೆರವು ನೀಡುವ ವಾಗ್ದಾನ ಮಾಡಿರುತ್ತಾನೆ. ಈ ಸಂಗತಿಯನ್ನು ಸ್ಪಷ್ಟವಾಗಿ ಹೇಳಿರಬೇಕು. ಗಂಡನ ವರಮಾನದಿಂದ ಹೆಂಡತಿಯೂ ತನ್ನ ಯಾರದಾದರೂ ಸಂಬಂಧಿಕರಿಗೆ ಸಹಾಯ ಮಾಡಲು ಗಂಡನನ್ನು ಒತ್ತಾಯಿಸಲು ಅಧಿಕಾರವಿಲ್ಲ. ಪುರುಷನ ಆದಾಯದ ಬಹುಭಾಗ ಗಂಡ – ಹೆಂಡತಿಯರ ಖರ್ಚುಗಳಲ್ಲದೆ ಹೊರಗೆ ಸಹ ಹೋಗುತ್ತಿದ್ದರೆ ಅದರ ವಿವರಣೆ ಮುಂಚಿತವಾಗಿಯೇ ಆಗಬೇಕು. ಇಬ್ಬರೂ ಈ ವಿಷಯದಲ್ಲಿ ವಿವಾಹಕ್ಕೆ ಮುಂಚಿತವಾಗಿಯೇ ಸಮ್ಮತಿಸಿರಬೇಕು.

ಮನೆಯನ್ನು ಹೇಗೆ ನಡೆಸಬೇಕು ಎಂಬುದನ್ನು ಅನ್ಯೋನ್ಯ ತೀರ್ಮಾನಿಸಿರಿ. ಮನೆಗೆ ಬೇಕಾದ ಕೆಲಸ – ಕಾರ್ಯಗಳು ಮತ್ತು ಖರೀದಿಗಳು ಯಾರು ಮಾಡುವರು? ಇದು ಸಾಧಾರಣವಾಗಿ ಮನೆಯವಳ ಹೊಣೆಯಾಗಿರುತ್ತದೆ. ಆದರೆ ಇದರ ಬಗ್ಗೆ ಯಾವುದೇ ಪ್ರತ್ಯೇಕ ಕಾನೂನು ಇಲ್ಲ. ತೀರ್ಮಾನಿಸಲ್ಪಡುವ ಸಂಗತಿಗಳಲ್ಲಿ ಇಬ್ಬರ ಸಮ್ಮತಿ ಇರಬೇಕು.

ಮನೆಯವಳು ಮನೆಯ ಖರ್ಚುಗಳ ಮೇಲ್ನೋಟ ವಹಿಸುವುದಾದರೆ ಮನೆಯ ಕೆಲಸ – ಕಾರ್ಯಗಳು ಒಳ್ಳೆಯದಾಗಿ ನಡೆಸಲು ಪ್ರತಿ ವಾರ ಅಥವಾ ಪ್ರತಿ ತಿಂಗಳು ನ್ಯಾಯಯುತವಾಗಿ ಒಟ್ಟು ಎಷ್ಟು ಹಣ ಪೂರೈಸಬೇಕು ಎಂದು ನಿರ್ಣಯಿಸಬೇಕು. ಇದಕ್ಕಾಗಿ ಯಾವಾಗಲೂ ಹಣವಿರಬೇಕು. ಸಾಕಾಗುವಷ್ಟು ಹಣ ಕೊಡಲಾಗಿದೆಯೇ ಎಂದು ಆಗಿಂದಾಗ್ಗೆ ನೋಡುತ್ತಿರಬೇಕು.

ಮನೆ ನಡೆಸುವುದರಲ್ಲಿ ಗಂಡ – ಹೆಂಡತಿಯರಿಗೆ ಏನೆಲ್ಲ ಕರ್ತವ್ಯಗಳು ಇರುವುವು ಎಂದು ನಿರ್ಣಯಿಸಬೇಕು. ಎಂದರೆ ವಿದ್ಯುತ್ತು, ಇಂಟರ್‌ನೆಟ್, ನೀರಿನ ಬಿಲ್ಲುಗಳು ಯಾರು ಕೊಡುವುದು ಮತ್ತು ವಾಹನದ ಪೆಟ್ರೋಲ್ ಹಾಗೂ ಇನ್ಶೂರೆನ್ಸ್ ಯಾರು ಕೊಡುವುದು ಇತ್ಯಾದಿ ಸಂಗತಿಗಳು.

ಮನೆಯ ಖರ್ಚುಗಳಲ್ಲದೆ ಹೆಂಡತಿಗೆ ತನ್ನ ಸ್ವಂತ ಆವಶ್ಯ ನೆರವೇರಿಸಲು ಜೇಬು ಖರ್ಚಿನ ಹಣ ಕೊಡಬೇಕು. ಹೆಂಡತಿ ದುಡಿದು ಸಂಪಾದಿಸುತ್ತಿದ್ದರೆ ಪ್ರಾಯಶಃ ಇದರ ಅಗತ್ಯವಿಲ್ಲ. ಹಾಗಿದ್ದರೆ ಮನೆಗೆ ಸಂಬಂಧಪಟ್ಟ ಕೆಲಸಗಳು ಪರಸ್ಪರರ ಒಪ್ಪಿಗೆಯೊಂದಿಗೆ ಆಗುವುದು.

**ಆ. ಜನರನ್ನು ಆಮಂತ್ರಿಸುವುದು:** ಗಂಡ – ಹೆಂಡತಿಯರು ಪರಸ್ಪರರಿಗೆ ತಿಳಿಸದೆ ಯಾರನ್ನೂ ಮನೆಗೆ ಆಮಂತ್ರಿಸಬಾರದು. (ಅಪರೂಪದ ಸಂದರ್ಭ ಇದಕ್ಕೆ ಹೊರತು). ಗಂಡ–ಹೆಂಡತಿಯರಲ್ಲಿ ಯಾರಿಗಾದರೂ ಅಸೌಕರ್ಯ ಉಂಟು ಮಾಡಿಸುವ ವ್ಯಕ್ತಿಗಳನ್ನು ಮನೆಗೆ ಆಮಂತ್ರಿಸಬೇಡಿರಿ. (ಅಲ್ಲಾಹನು ಹಕ್ಕು ನಿಶ್ಚಯಿಸಿದ ವ್ಯಕ್ತಿಗಳನ್ನು ಹೊರತು, ಎಂದರೆ ತಂದೆ – ತಾಯಂದಿರು ಮತ್ತು ರಕ್ತ – ಸಂಬಂಧಿಕರು).

**ಇ. ಸಂಬಂಧಿಕರನ್ನು ಭೇಟಿಯಾಗುವುದು:** ಉಭಯ ಪಕ್ಷದ ತಂದೆ – ತಾಯಂದಿರನ್ನು ನಿಯತವಾಗಿ ಭೇಟಿಯಾಗುವುದು ಒಳ್ಳೆಯ ಕಾರ್ಯವಾಗಿದೆ. ಅವರಿಗೆ ಸಲ್ಲಬೇಕಾದ ಕರ್ತವ್ಯಗಳಿವೆ. ಅವರ ವಿಶ್ವಾಸವನ್ನು ಕಾಪಾಡಲು ಅವುಗಳನ್ನು ಈಡೇರಿಸಬೇಕು.

**ಈ. ರಜೆಗಳು:** ವಿವಾಹ ಒಂದು ದುಬಾರಿ ಸಂಗತಿಯಾಗಿದೆ. ಮೊದಲ ವರ್ಷವೇ ರಜೆಗಳನ್ನು ಆವಶ್ಯ ಪಡುವುದು ಪ್ರಾಯಶಃ ಸರಿಯಲ್ಲ. ಆದರೆ ಇದರ ಬಗ್ಗೆ ಯಾವುದೇ ಕಟ್ಟುನಿಟ್ಟಾದ ನಿಯಮಗಳು ಇಲ್ಲ. ರಜೆಗಳನ್ನು ಆವಶ್ಯ ಪಡುವ ಮುಂಚೆ ಮನೆಯ ಖರ್ಚುಗಳನ್ನು ಗಮನದಲ್ಲಿಡಬೇಕು. ಅದೇ ರೀತಿ ಸಾಂಪತ್ತಿಕ ನೆಲೆ ಮತ್ತು ಯುಕ್ತತೆಯನ್ನು ಗಮನದಲ್ಲಿಡಬೇಕು. ಉತ್ತಮವಾದ ರಜಾದಿನಗಳು ಜೋಡಿಯನ್ನು ಒಂದುಗೂಡಿಸುತ್ತವೆ ಮತ್ತು ಅವರಲ್ಲಿ ನವಚೈತನ್ಯ ತುಂಬುತ್ತವೆ. ಒತ್ತಡದಲ್ಲಿ ತೆಗೆದ ರಜೆಗಳು ಇಬ್ಬರಿಗೂ ಯಾವುದೇ ಪ್ರಯೋಜನ ನೀಡದು.

**ಉ. ಮಕ್ಕಳು:** ಮಕ್ಕಳು ಯಾವಾಗ ಬೇಕು ಎಂಬುದನ್ನು ಪರಸ್ಪರರ ಒಮ್ಮತಾಭಿಪ್ರಾಯದೊಂದಿಗೆ ನಿರ್ಧರಿಸಬೇಕು. ಸಂಗಾತಿಯ ತಂದೆ –

ತಾಯಂದರಿಂದ ಯಾವುದೇ ವಿಧದ ಒತ್ತಡವಿರಬಾರದು. ಆದರೆ ಅವರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಬಹುದು. ಮಕ್ಕಳು ಯಾವಾಗ ಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿದ್ದರೆ ಅದನ್ನು ವಿವಾಹದ ಮೊದಲ ಅಥವಾ ಎರಡನೇ ವರ್ಷದಲ್ಲಿ ವಿವಾದಾಸ್ಪದವನ್ನಾಗಿ ಮಾಡದಿರಿ. ಪ್ರಸವ ಸಂಬಂಧಿಯಾದ ಯಾವುದಾದರೂ ತೊಂದರೆಗಳು ಇರಬಹುದು. ವೈದ್ಯಕೀಯ ದೃಷ್ಟಿಯಿಂದ ಹೇಳುವುದಾದರೆ, ಬಂಜೆತನ ಎರಡೂ ಕಡೆಯಿಂದ ಸಮವಾಗಿ ಇರಬಹುದು. ಆದ್ದರಿಂದ ಒಂದು ಪಕ್ಷವನ್ನು ದೂರುವುದು ಸಮಂಜಸವಲ್ಲ. ಒಂದು ವರ್ಷದ ನಂತರವೂ ಮಕ್ಕಳಾಗದಿದ್ದರೆ ವೈದ್ಯಕೀಯ ಸಹಾಯ ಪಡೆಯಬೇಕು. ಇಬ್ಬರೂ ಒಟ್ಟಿಗೆ ಡಾಕ್ಟರನ್ನು ಭೇಟಿಯಾಗಬೇಕು.

**ಊ. ಹಣ ಮತ್ತು ಸೊತ್ತು:** ಪುರುಷನ ಸಂಪಾದನೆ ಗಂಡ – ಹೆಂಡತಿ ಇಬ್ಬರಿಗೂ ಸೇರಿದ್ದಾಗಿದೆ, ಆದರೆ ಹೆಂಡತಿಯ ಸಂಪಾದನೆ ಅವಳಿಗೆ ಮಾತ್ರ ಸೇರಿದ್ದಾಗಿದೆ. ಅದನ್ನು ಅವಳು ಹೇಗೆ ಬೇಕಾದರೂ ಉಪಯೋಗಿಸಬಹುದು. ಹೆಂಡತಿಯ ಸಂಪಾದನೆಯಿಂದ ಭಾಗ ಪಡೆಯಲಿಕ್ಕಾಗಿ ಗಂಡ ಅದರಲ್ಲಿ ಕಣ್ಣಿಡಬಾರದು. ಅದೇ ರೀತಿ ಅವಳ ಸಂಪಾದನೆ ತಮಗೆ ಸಿಗಲಿಕ್ಕಾಗಿ ಒತ್ತಾಯ ಮಾಡಲೂ ಬಾರದು, ಅವಳು ಒಪ್ಪುವಂತೆ ಮಾಡಲು ಪ್ರೇರೇಪಿಸಲೂ ಬಾರದು. ಹೆಂಡತಿ ಸಹ ಸೇರಿ ಕೊಡಬೇಕೆಂಬ ಯೋಚನೆಯಿಂದ ಮನೆಯ ಖರ್ಚಿಗಾಗಿ ಕಡಿಮೆ ಕೊಡುವ ಗಂಡ ತಪ್ಪು ಮಾಡುತ್ತಾನೆ. ಹೆಂಡತಿಯ ಕಡೆಯಿಂದ ಏನಾದರೂ ಹಣ ಸಿಗುವುದಾದರೆ ಅದು ಅವಳ ಸ್ವ-ಇಚ್ಛೆ ಮತ್ತು ಆತ್ಮ ಸಂತೋಷದಿಂದಾಗಿರಬೇಕು.

**ರಿಶ್ತನಾತ ಸಮಿತಿ ಕೆನಡಕ್ಕೆ ಹಝ್ರತ್ ಖಲೀಫತುಲ್ ಮಸೀಹರ(ಅಯ್ಯದಹುಲ್ಲಾಹ್) ನಿರ್ದೇಶನಗಳು:**

ರಿಶ್ತನಾತ ಸಮಿತಿಯ ಸೆಕ್ರಿಟರಿ ಸಾಹಿಬರು ಹೇಳಿದರು: ವಿದ್ಯಾವಂತ ಯುವಕರ ಆಯ್ಕೆಯ ಕ್ಷೇತ್ರ (ಸೆಲೆಕ್ಷನ್ ಏರಿಯ) ತುಂಬ ವಿಶೇಷವಾಗಿರುತ್ತದೆ.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಹೇಳಿದರು: ಹುಡುಗಿ ಪರ್ದಾ ಧರಿಸಬಾರದು, ಹಿಜಾಬ್ ತೊಡಬಾರದು, ತಲೆಯನ್ನು ಮರೆಸಬಾರದು ಎಂದೆಲ್ಲ ಒತ್ತಾಯಿಸುತ್ತಾರೆ ಎಂದು ಸಹ ವಿದ್ಯಾವಂತ ಜನರ ಬಗ್ಗೆ ನನಗೆ ತಿಳಿದು ಬಂದಿದೆ. ಹುಝೂರ್ ಹೇಳಿದರು: ಇಂಥವರ ಕೌನ್ಸಿಲಿಂಗ್ ಮಾಡಬೇಕು. ಇಸ್ಲಾಮಿನ ಪಾಠವೇನೆಂದು ಅವರಿಗೆ ತಿಳಿಸಿಕೊಡಬೇಕು.

ಹುಝೂರ್ ಹೇಳಿದರು: ಜನರಲ್ಲಿ ಮತ್ತು ನವ ವಿವಾಹಿತ ಜೋಡಿಗಳಲ್ಲಿ ತಮ್ಮ ಹೊಣೆಗಾರಿಕೆಯ ಬಗ್ಗೆ ಅರಿವು ಮೂಡಲಿಕ್ಕಾಗಿ ನಾನು ನಿಕಾಹ್ ಖುತ್‌ಬಗಳಲ್ಲಿ ಕೆಲವು ಸಂಗತಿಗಳನ್ನು ಹೇಳಲು ಶುರುಮಾಡಿದ್ದೇನೆ. ನನ್ನ ಖುತ್‌ಬಗಳಿಂದ ಮುಖ್ಯಾಂಶಗಳನ್ನು ತೆಗೆದು ತಮ್ಮ ಕೌನ್ಸಿಲಿಂಗಿನ ನಿರ್ದೇಶನಗಳಲ್ಲಿ ಸೇರಿಸಿರಿ ಎಂದು ಮುಬಲ್ಲಿಗ್‌ರೊಂದಿಗೆ ನಾನು ಹೇಳುತ್ತಿರುತ್ತೇನೆ.

ಹುಝೂರ್ ಹೇಳಿದರು: ಹುಡುಗ – ಹುಡುಗಿಯರು ಕೇಳುವ ವಿವಿಧ ಪ್ರಶ್ನೆಗಳ ಸರಿಯಾದ ಉತ್ತರ ನಿಮಗೆ ತಿಳಿದಿರಬೇಕು.

ಹುಝೂರ್ ಹೇಳಿದರು: ನಾನು ವಿವಿಧ ಸಂದರ್ಭಗಳಲ್ಲಿ ವಿವಿಧ ನಿರ್ದೇಶನಗಳನ್ನು ನೀಡಿರುವೆನು. ಅದನ್ನೆಲ್ಲ ಪಡೆಯಬೇಕು. ಯಾವುದಾದರೂ ಒಂದು ಖುತ್‌ಬವನ್ನು ಅವಲಂಬಿಸಬಾರದು.

ಹುಝೂರ್ ಹೇಳಿದರು: ವಿವಾಹದ ಉದ್ದೇಶವೇನೆಂದೂ ಇದರ ಬಗ್ಗೆ ಇಸ್ಲಾಮಿನ ಪಾಠವೇನೆಂದೂ ಅವರ ಯೋಚನೆ ಎಷ್ಟರ ಮಟ್ಟಿಗೆ ಸರಿಯೆಂದೂ ಕೌನ್ಸಿಲಿಂಗಿನಲ್ಲಿ ಅವರಿಗೆ ಮನವರಿಕೆ ಮಾಡಿಸಿರಿ. ಅವರು ಎಲ್ಲಿಂದ ಬಂದವರೆಂದೂ ಅವರ ಸಂಬಂಧ ಎಂತಹ ಕುಟುಂಬದೊಂದಿಗೆ ಇದೆ ಎಂದೂ ಅವರ ಹಿರಿಯರು ಎಂತಹ ತ್ಯಾಗ ಮಾಡಿದ್ದಾರೆ ಎಂದೂ ಅನಂತರ ಅಲ್ಲಾಹನು ತನ್ನ ಅನುಗ್ರಹಗಳನ್ನು ಹೇಗೆ ವರ್ಷಿಸಿದ್ದಾನೆ ಎಂದೂ ಹೇಳಿಕೊಡಿರಿ. ಇನ್ನು ಲೌಕಿಕತೆಯ ಕಡೆಗೆ ವಾಲಬೇಡಿರಿ ಎಂದೂ ದೀನಿನಲ್ಲಿ, ತಮ್ಮ ಕುಟುಂಬದ ಒಳಿತುಗಳಲ್ಲಿ, ಧರ್ಮನಿಷ್ಠೆಯಲ್ಲಿ ಮತ್ತು ಕುಟುಂಬದ

ಘನತೆಯನ್ನು ಕಾಪಾಡುವುದರಲ್ಲಿ ನೆಲೆನಿಲ್ಲುವುದೇ ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞತೆ ಸೂಚನೆಯಾಗಿದೆ ಎಂದೂ ತಿಳಿಸಿಕೊಡಿರಿ.

ಹುಝೂರ್ ಹೇಳಿದರು: ಒಟ್ಟಿನಲ್ಲಿ, ಮುಖ್ಯವಾದ ಸಂಗತಿ ಒಳಿತು ಮತ್ತು ದೇವಭಕ್ತಿಯಾಗಿದೆ. ಇದು ಇರಬೇಕು.

ಹುಝೂರ್ ಹೇಳಿದರು: ಕೆನಡ, ಅಮೇರಿಕ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಕೆಲವು ಹುಡುಗರು ಕೆಲವು ಅಹಿತಕರವಾದ ಕೆಲಸಗಳಲ್ಲಿ ಒಳಪಡುತ್ತಾರೆ ಮತ್ತು ಕೆಲವು ಕೊರತೆಗಳು ಅವರಲ್ಲಿ ಉಂಟಾಗುತ್ತವೆ. ತರಬೇತಿ ಕೊಟ್ಟರೆ ಮತ್ತು ಮನವರಿಕೆ ಮಾಡಿಸಿದರೆ ಕೆಲವು ಬಾರಿ ಸುಧಾರಣೆಯಾಗುತ್ತದೆ. ಕೆಲವು ಬಾರಿ ಆಗುವುದಿಲ್ಲ. ಅದೇ ರೀತಿಯಲ್ಲಿ ಕೆಲವು ಹುಡುಗಿಯರಲ್ಲಿ ಸಹ ಕೊರತೆಗಳು ಉಂಟಾಗುತ್ತವೆ. ಹೇಗಿದ್ದರೂ ವಿವಾಹ ಸಂಬಂಧದ ವೇಳೆ ಈ ಸಂಗತಿಗಳು ಮುಂದೆ ಬರಬೇಕು. ಅನಂತರ ಜಗಳವಾಗದಿರಲಿಕ್ಕಾಗಿ ಉಭಯ ಪಕ್ಷದವರು ದೇವಭಯವಿರಿಸಿಕೊಂಡು ಇದನ್ನೆಲ್ಲ ಹೇಳಬೇಕು.

ಹುಝೂರ್ ಹೇಳಿದರು: ರಿಶ್ತನಾತ ಸಮಿತಿ ಸಂಗತಿಗಳನ್ನು ರಹಸ್ಯವಾಗಿರಿಸಬೇಕು. ನೀವು ವಿಶ್ವಾಸಾರ್ಹರಾಗಬೇಕು. ತಮ್ಮ ವಿಶ್ವಾಸವನ್ನು ಕಾಪಾಡಿರಿ. ಜನರ ಹಿತಚಿಂತಕರಾಗಿರಿ. ಹುಡುಗನೊಂದಿಗೆ ಸಹಾನುಭೂತಿ ತೋರಿಸಿರಿ, ಹುಡುಗಿಯೊಂದಿಗೆ ಸಹಾನುಭೂತಿ ತೋರಿಸಿರಿ. ನೀವು ನಿಮ್ಮ ಸಮಿತಿಯ ಅಂಗಸಂಖ್ಯೆಯನ್ನು ವರ್ಧಿಸಬಹುದಾಗಿದೆ. ಉತ್ತಮ ಸಲಹೆಗಾರರನ್ನು, ಬುದ್ಧಿವಂತರನ್ನು ಮತ್ತು ಸಜ್ಜನರನ್ನು ನಿಮ್ಮೊಂದಿಗೆ ಸೇರಿಸಬಹುದಾಗಿದೆ. ಮುಬಲ್ಲಿಗನ್ನು ಸೇರಿಸಬಹುದಾಗಿದೆ. ಒಟ್ಟಿನಲ್ಲಿ, ಹೇಳಲ್ಪಡುವ ಸಂಗತಿಗಳು ರಹಸ್ಯವಾಗಿ ಇಡಲ್ಪಡುವುವು ಎಂಬ ಭರವಸೆ ಜನರಲ್ಲಿ ನಿಮ್ಮ ಬಗ್ಗೆ ಉಂಟಾಗಬೇಕು.

ಹುಝೂರ್ ಹೇಳಿದರು: ಹುಡುಗಿ ವರದಕ್ಷಿಣೆ ತಂದಿಲ್ಲ, ಮಕ್ಕಳಾಗುತ್ತಿಲ್ಲ, ಅವಳಿಗೆ ಕೇವಲ ಹೆಣ್ಮಕ್ಕಳು ಆಗುತ್ತಿವೆ ಎಂದೆಲ್ಲ ವಿವಾಹದ ನಂತರ ದೂಷಿಸುವ ಕೆಲವು ಕುಟುಂಬಗಳಿವೆ. ಈ ರೀತಿಯಲ್ಲಿ

ಹುಡುಗಿಯನ್ನು ದೂಷಿಸುವಾಗ ವಿವಾಹ ವಿಚ್ಛೇದನ ಆಗುತ್ತದೆ. ಕೆಲವು ಅಜ್ಜಿಯಂದಿರು ಪಾಕಿಸ್ತಾನದ ಗ್ರಾಮೀಣ ವಾತಾವರಣದಿಂದ ಬಂದವರಾಗಿದ್ದಾರೆ. ಅವರಲ್ಲಿ ಅದರ ಪ್ರಭಾವವಿರುತ್ತದೆ. ಅವರ ಈ ತಿಳಿಗೇಡಿತನದಿಂದ ಕೆಲವು ಸಂಬಂಧಗಳು ಹಾಳಾಗುತ್ತವೆ.

ಹುಝೂರ್ ಹೇಳಿದರು: ಇಲ್ಲಿ ಬಹಳ ಕಾಲದಿಂದ ನೆಲೆಸಿರುವ ಕುಟುಂಬಗಳು ಇವೆ. ಅವರ ಯೋಚನೆಗಳು ಇಲ್ಲಿಯದ್ದಾಗಿ ಬಿಟ್ಟಿವೆ. ಸ್ವತಂತ್ರವಾದ ಯೋಚನೆಗಳಾಗಿವೆ. 'ನಾವು ಇಂತಿಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ' ಎಂದು ಹುಡುಗ – ಹುಡುಗಿಯರು ನನಗೆ ಪತ್ರ ಬರೆಯುತ್ತಾರೆ. ಅವರ ಎಲ್ಲ ಪತ್ರಗಳನ್ನು ನಿಮಗೆ ಗುರುತು ಮಾಡಿ ಕೊಡುವುದಾದರೆ ನಿಮಗೆ ಬೇರೆ ಕೆಲಸ ಮಾಡಲು ಬಿಡುವು ಸಿಗಲಿಕ್ಕಿಲ್ಲ.

ಹುಝೂರ್ ಹೇಳಿದರು: ತಂದೆ – ತಾಯಂದಿರಲ್ಲಿ ಪರಸ್ಪರ ವಿಶ್ವಾಸ ಮತ್ತು ಹೊಂದಾಣಿಕೆ ಇಲ್ಲದಿದ್ದರೆ ಕೂಡ ಸಂಬಂಧದಲ್ಲಿ ಸಮಸ್ಯೆಗಳು ಉಂಟಾಗುತ್ತವೆ. ಆದ್ದರಿಂದ ಮನಶಾಸ್ತ್ರಜ್ಞನನ್ನು ಸಹ ನಿಮ್ಮೊಂದಿಗೆ ಇರಿಸಬೇಕು.

ಹುಝೂರ್ ಹೇಳಿದರು: ಅವರು ಯಾವ ವಿಧದ ಸಂಬಂಧ ಆವಶ್ಯಪಡುತ್ತಿದ್ದಾರೆ ಎಂದು ಹುಡುಗ –ಹುಡುಗಿಯರೊಂದಿಗೆ ಕೇಳಬೇಕು. ಎಂತಹ ಗಂಡ, ಎಂತಹ ಹೆಂಡತಿ ಬೇಕು? ಹುಡುಗನ ಹೆತ್ತವರೊಂದಿಗೆ ಹುಡುಗಿ ಇರಬೇಕಾದರೆ ಯಾವ ರೀತಿಯ ಪರಿಮಿತಿಗಳು ಇರಬೇಕು? ತಂದೆ – ತಾಯಿಗೆ ಮತ್ತು ಹೆಂಡತಿಗೆ ಸಲ್ಲಬೇಕಾದ ಹಕ್ಕುಗಳನ್ನು ಸಲ್ಲಿಸಲು ಗಂಡನಿಗೆ ಹೇಳಬೇಕು. ಎಲ್ಲ ಹಕ್ಕುಗಳ ಬಗ್ಗೆ ಹೇಳಿಕೊಡಿರಿ. ಹಕ್ಕುಗಳ ಕುರಿತು ಇಸ್ಲಾಮಿನ ಪಾಠಗಳು ಹೇಳಿಕೊಡಿರಿ. ಹಝ್ರತ್ ಮಸೀಹ್ ಮೌಊದ್‌ರ(ಅ) ಉಲ್ಲೇಖಗಳನ್ನು ತೆಗೆದು ಕೊಡಬಹುದಾಗಿದೆ.

ಹುಝೂರ್ ಹೇಳಿದರು: ಇದು ತರ್‌ಬಿಯತ್ ವಿಭಾಗದ ಅತಿ ಮುಖ್ಯವಾದ ಕೆಲಸವಾಗಿದೆ. ಅದೇ ರೀತಿ ಖುದ್ದಾಮ್, ಅನ್ಸಾರ್ ಮತ್ತು ಲಜ್‌ನದ ತರ್‌ಬಿಯತ್ ವಿಭಾಗಗಳ ಅತಿಮುಖ್ಯವಾದ ಕೆಲಸವಾಗಿದೆ.

ಎಲ್ಲರೂ ಸೇರಿ ತರಬೇತಿ ಮಾಡುತ್ತಿರಿ. ಹುಝೂರ್ ಹೇಳಿದರು: ಸ್ಥಿತಿಗತಿಗಳು ಹೀಗಿವೆ, ಸಮಸ್ಯೆಗಳು ಹೀಗಿವೆ ಮತ್ತು ಹೀಗೆ ಇರಬೇಕಾಗುವುದು ಎಂದೆಲ್ಲ ಹುಡುಗ–ಹುಡುಗಿಯರೊಂದಿಗೆ, ಎರಡೂ ಕುಟುಂಬದವರೊಂದಿಗೆ ಸ್ಪಷ್ಟವಾಗಿ ಹೇಳಿರಿ. ಅನಂತರ ಅವರ ಇಷ್ಟ ಪ್ರಕಾರ ತೀರ್ಮಾನಿಸಲಿ.

ಹುಝೂರ್ ಹೇಳಿದರು: ನೀವೊಂದು ಸೆಮಿನಾರ್ (ವಿಚಾರಗೋಷ್ಠಿ) ಸಂಘಟಿಸಬೇಕು. ಅದರಲ್ಲಿ ಈ ಸಮಸ್ಯೆಗಳನ್ನು ವ್ಯಕ್ತಿಗಳ ಹೆಸರು ಹೇಳದೆ ಚರ್ಚಿಸಬೇಕು. ಈ ಸಂಗತಿಗಳ ಮತ್ತು ಸಮಸ್ಯೆಗಳ ಕುರಿತು ಇಸ್ಲಾಮಿನ ಅಧ್ಯಾಪನೆಗಳನ್ನು ವಿವರಿಸಬೇಕು.

ಹುಝೂರ್ ಹೇಳಿದರು: ಒಳಗಿನ ಸಂಗತಿಗಳನ್ನು ಅರಿಯಲು ಖುದ್ದಾಮ್ ಮತ್ತು ಲಜ್‌ನ ಅವರವರ ವಿಭಾಗದಲ್ಲಿ ಸಮೀಕ್ಷೆ ನಡೆಸಿ ಪ್ರಶ್ನಾವಳಿ ತಯಾರು ಮಾಡಬೇಕು. ಹುಝೂರ್ ಹೇಳಿದರು: ನಾನು ಯು.ಕೆ.ಯ ಖುದ್ದಾಮ್ ಮತ್ತು ಲಜ್‌ನದಿಂದ ಬೇರೆಬೇರೆಯಾಗಿ ಸಮೀಕ್ಷೆ ನಡೆಸಿದ್ದೆ. ಹುಡುಗ –ಹುಡುಗಿಯರಿಂದ ಹಲವು ಸಂಗತಿಗಳು ಮತ್ತು ಪ್ರಶ್ನೆಗಳು ಬಂದಿದ್ದವು. ಅವುಗಳನ್ನು ಮುಂದಿರಿಸಿ ನಾನು ಯು.ಕೆ., ಜರ್ಮನಿಯ ಇಜ್‌ತಿಮ ಮತ್ತು ಜಲಸಗಳಲ್ಲಿ ಭಾಷಣಗಳನ್ನು ತಯಾರಿಸಿದ್ದೆ. ಈ ರೀತಿಯಲ್ಲಿ ಸಮೀಕ್ಷೆ ನಡೆಸುವುದರಿಂದ ಮತ್ತು ಉಭಯ ಪಕ್ಷಗಳ ಸಮಸ್ಯೆಗಳನ್ನು ಅರಿಯುವುದರಿಂದ ಹಲವು ಪ್ರಶ್ನೆಗಳು ಮುಂದೆ ಬರುವುದು. ಇದರ ಪ್ರಕಾರ ತರಬೇತಿ ಮತ್ತು ಸುಧಾರಣೆಯ ಪ್ರವರ್ತನೆ ರೂಪರೇಷೆ ತಯಾರು ಮಾಡಬಹುದಾಗಿದೆ.

ಹುಝೂರ್ ಹೇಳಿದರು: 'ನಮ್ಮ ಹುಡುಗ ಸಂಪಾದಿಸುತ್ತಿದ್ದಾನೆ, ಅವನಿಗೆ ಬೇಕಾದ ಸಂಬಂಧ ನಾವು ಸ್ವತಃ ನೋಡುವೆವು' ಎಂದು ಕೆಲವು ಹುಡುಗರ ತಾಯಂದಿರು ಹೇಳುತ್ತಾರೆ. ಕೆಲಸಕ್ಕೆ ಬಾರದವರನ್ನು ಜಮಾಅತಿಗೆ ಒಪ್ಪಿಸುತ್ತಾರೆ. ಸಂಪಾದಿಸುವ ಹುಡುಗನು ಸಂಪಾದಿಸುತ್ತಿರಲಿ ಎಂದು ಕಾಯುತ್ತಾರೆ, ಅನಂತರ ತುಂಬ ತಡವಾಗಿ ಹೆಣ್ಣು ಲಭ್ಯವಾಗದಾಗ ಅವರಿಗೆ ಸಂಬಂಧವನ್ನು ಹುಡುಕಲು ಜಮಾಅತನ್ನು ಬೇಡುತ್ತಾರೆ.

ಹುಝೂರ್ ಹೇಳಿದರು: ಯು.ಕೆ.ಯ ಸಮೀಕ್ಷೆ ಪ್ರಕಾರ ಅಲ್ಲಿ 65% ಸಂಬಂಧಗಳು ನೆಲೆನಿಲ್ಲುತ್ತವೆ, 35% ಮುರಿದು ಹೋಗುತ್ತವೆ. ಕೆನಡದಲ್ಲಿ 20% ಮುರಿದು ಹೋಗುತ್ತವೆ. ಈ ಸಂಖ್ಯೆಯನ್ನು ಸಹ ಕಡಿಮೆ ಮಾಡಬೇಕು. ಈ ಸಂಖ್ಯೆ ವರ್ಧಿಸದಿರಲಿ.

ಹುಝೂರ್ ಹೇಳಿದರು: ಹುಡುಗನು ಅಹ್ಲೆ-ಕಿತಾಬ್‌ನವನು (ಗ್ರಂಥ ನೀಡಲ್ಪಟ್ಟವರು) ಎಂದು ಕೆಲವು ಬಾರಿ ಹೇಳಲಾಗುತ್ತದೆ. ಈ ಕಾಲದಲ್ಲಿ ಶಿರ್ಕ್ (ಬಹುದೇವಾರಾಧನೆ) ಮಾಡದ ಅಹ್ಲೆ-ಕಿತಾಬಿನವರು ಯಾರಿದ್ದಾರೆ. ಮುಶ್ರಿಕ್‌ನನ್ನು (ಬಹುದೇವಾರಾಧಕ) ವಿವಾಹವಾಗಲು ಅನುಮತಿಯಿಲ್ಲ. ಆದ್ದರಿಂದ ಅವರಿಗೆ ಮನವರಿಕೆ ಮಾಡಿಸಲು ನೀವು ಸತತ ಪ್ರಯತ್ನ ಮಾಡಬೇಕಾಗುವುದು.

ಹುಝೂರ್ ಹೇಳಿದರು: ಜಮಾಅತಿನ ಹೊರಗಿನಿಂದ ವಿವಾಹ ಮಾಡುವ ಪುರುಷನನ್ನು ಜಮಾಅತಿನ ವ್ಯವಸ್ಥೆಯಿಂದ ಹೊರಗೆ ಹಾಕಲು ಕಾರಣವೇನೆಂದರೆ, ಅವರು ಅಹ್ಮದಿಯೇತರ ಮೌಲವಿ ಅಥವಾ ಖಾಝಿಯಿಂದ ನಿಕಾಹ್ ಮಾಡಿಸಿರುತ್ತಾರೆ.

ಹುಝೂರ್ ಹೇಳಿದರು: ಒಬ್ಬ ವ್ಯಕ್ತಿ ಅಹ್ಮದಿಯೇತರ ಹುಡುಗಿಯನ್ನು ಜಮಾಅತಿನ ಅನುಮತಿ ಪಡೆದು ವಿವಾಹವಾಗುವುದಾದರೆ, ಅವನ ನಿಕಾಹ್ ಅಹ್ಮದಿ ಮಾಡಿಸುತ್ತಾನೆ. ಇದು ಪ್ರತ್ಯೇಕವಾದ ಸ್ಥಿತಿಗತಿಯನ್ನು ಮುಂದಿರಿಸಿ ಅನುಮತಿ ನೀಡಿದ್ದಾಗಿರುತ್ತದೆ.

ಹುಝೂರ್ ಹೇಳಿದರು: ಕೆಲವು ಅಹ್ಮದಿಯೇತರ ಹುಡುಗಿಯರು ಅವರ ಹೆತ್ತವರ ನಿರಾಕರಣೆಯ ಕಾರಣದಿಂದ ಅವರಿಗೆ ವಲಿಯನ್ನು ನಿಶ್ಚಯಿಸಲು ಅಪೇಕ್ಷಿಸುತ್ತಾರೆ. ಜಮಾಅತ್ ಪ್ರತ್ಯೇಕವಾದ ಸನ್ನಿವೇಶದ ಕಾರಣ ವಲಿಯನ್ನು ನಿಶ್ಚಯಿಸುತ್ತದೆ. ಇಂತಹ ಸಂದರ್ಭದಲ್ಲಿ ನಿಕಾಹ್ ಮಸೀದಿಯಲ್ಲಿ ನಡೆಯುವುದಿಲ್ಲ. ನಿಕಾಹ್ ಮುಬಲ್ಲಿಗ್ ನಿರ್ವಹಿಸುವುದಿಲ್ಲ. ಬೇರೆ ಯಾವುದಾದರೂ ಜಾಗದಲ್ಲಿ, ಯಾವುದಾದರೂ ಅಹ್ಮದಿ ನಿರ್ವಹಿಸುತ್ತಾನೆ.

ಹುಝೂರ್ ಹೇಳಿದರು: ಜಮಾಅತಿನ ಹುದ್ದೇದಾರರನ್ನು ಇಂತಹ ವಿವಾಹದಲ್ಲಿ ಭಾಗವಹಿಸುವುದರಿಂದ ನಾನು ತಡೆದಿದ್ದೇನೆ.

ಹುಝೂರ್ ಹೇಳಿದರು: ಅರೇಂಜ್ಡ್ ಮ್ಯಾರೇಜ್ ಸಿಸ್ಟಮ್‌ನಲ್ಲಿ ಸಹ ಶಿಕ್ಷಣದ ಕೊರತೆ ಇದೆ. ಮೊದಲ ಸಂಗತಿ ದುಆ ಆಗಿದೆ ಎಂದು ಅವರಿಗೆ ಮನವರಿಕೆ ಮಾಡಿಸಿರಿ. ವಿವಾಹದಲ್ಲಿ ಸಂಪತ್ತು, ಕುಟುಂಬ ಮಹಿಮೆ, ಕುಲ ಮಹಿಮೆ, ಧರ್ಮನಿಷ್ಠೆಯನ್ನು ನೋಡಲಾಗುತ್ತದೆ. ನೀವು ಧರ್ಮನಿಷ್ಠೆಯನ್ನು ನೋಡಿರಿ, ನಿಮ್ಮ ದೃಷ್ಟಿ ದೀನಿನಲ್ಲಿ ಆಗಿರಬೇಕು ಎಂದು ಹಝ್ರತ್ ಪೈಗಂಬರ್[ಸ] ಹೇಳಿದ್ದಾರೆ. ಹುಡುಗನೂ ಧರ್ಮನಿಷ್ಠನಾಗಿರಬೇಕು ಹುಡುಗಿಯೂ ಧರ್ಮನಿಷ್ಠಳಾಗಿರಬೇಕು.

ಹುಝೂರ್ ಹೇಳಿದರು: ಸಂಬಂಧ ನೋಡುವ ವಿಷಯದಲ್ಲಿ ಮತ್ತು ತೀರ್ಮಾನ ಮಾಡುವುದರಲ್ಲಿ ನೀವು ಜನರನ್ನು ದುಆದ ಕಡೆಗೆ ತರಬೇಕು. ದುಆ ಮಾಡಿದ ನಂತರ ತೀರ್ಮಾನಿಸಿರಿ ಎಂದು ಹೇಳಬೇಕು.

ಅರೇಂಜ್ಡ್ ಮ್ಯಾರೇಜ್‌ನಲ್ಲಿ ಸಹ ಕೌನ್ಸಿಲಿಂಗಿನ ಆವಶ್ಯಕತೆ ಇದೆ. ಮನೆಗೆ ಹೋಗಿ ಹುಡುಗಿಯ ಫೋಟೋಗಳನ್ನೆಲ್ಲ ತೆಗೆದ ನಂತರ ನಿರಾಕರಿಸುತ್ತಾ ಇರುವುದು ತಪ್ಪು. ಹುಡುಗಿಯನ್ನು ಮಾರಾಟ ಸಾಮಗ್ರಿಯನ್ನಾಗಿ ಗಣಿಸಬಾರದು. ಸಂಬಂಧದ ಆಯ್ಕೆಯಲ್ಲಿ ಸಹ ಕೆಲವು ಮರ್ಯಾದೆಗಳನ್ನು ಗಮನದಲ್ಲಿಡಬೇಕಾಗಿದೆ. ಅವುಗಳನ್ನು ಕಾಪಾಡಬೇಕು.

[ಕೆಲವು ಸಲ ಹುಡುಗ ಅಥವಾ ಹುಡುಗಿಗೆ ಸಂಬಂಧಪಟ್ಟ ತನಿಖೆಯ ವರದಿಯನ್ನು ಮುಬಲ್ಲಿಗ್ ಅಥವಾ ಸದರ್ ಜಮಾಅತ್ (ಹುಡುಗನ/ಹುಡುಗಿಯ) ಕುಟುಂಬಕ್ಕೆ ಹೇಳಿಕೊಡುತ್ತಾರೆ. ಇದರಿಂದ ಅಸಮಾಧಾನಗಳು ಉಂಟಾಗುತ್ತವೆ] ಇದಕ್ಕೆ ಉತ್ತರವಾಗಿ ಹುಝೂರ್ ಹೇಳಿದರು: 'ಮುಬಲ್ಲಿಗ್ ಅಥವಾ ಸದರ್ ಜಮಾಅತ್ ಸ್ವತಃ ಯಾರಿಗೂ ಹೇಳಬಾರದೆಂದು ನಿರ್ದೇಶಿಸಬೇಕು. ರಿಪೋರ್ಟ್ ಏನಿದ್ದರೂ ಸೆಕ್ರೆಟರಿ ತರ್‌ಬಿಯತ್ ಅಥವಾ ಅಮೀರಿಗೆ ಬರಬೇಕು. ಅನಂತರ ಯಾರಿಗೆ ಹೇಳಬೇಕಿದ್ದರೂ ನಿಮ್ಮಿಬ್ಬರಲ್ಲಿ (ತರ್‌ಬಿಯತ್ ಸೆಕ್ರೆಟರಿ/ಅಮೀರ್)

ಯಾರಾದರೂ ಹೇಳಬೇಕು. ಇದು ಮುಬಲ್ಲಿಗರ ಮತ್ತು ಜಮಾಅತಿನ ಅಧ್ಯಕ್ಷರ ಜಮಾಅತಿನ ಸದಸ್ಯರೊಂದಿಗಿನ ವ್ಯವಹಾರದಲ್ಲಿ ಮತ್ತು ಜಮಾಅತಿನ ತರಬೇತಿಗೆ ಸಂಬಂಧಪಟ್ಟ ಕಾರ್ಯಗಳಲ್ಲಿ ಅಡ್ಡಿಯುಂಟಾಗದಿರಲಿಕ್ಕಾಗಿದೆ. ತರಬೇತಿಯ ಕಾರ್ಯಗಳು ನಡೆಯುತ್ತಿರಲಿ. ಯಾವುದಾದರೂ ಕುಟುಂಬಕ್ಕೆ ಅಸಮಾಧಾನ ವ್ಯಕ್ತಪಡಿಸಲಿಕ್ಕಿದ್ದರೆ ಅದು ಕೇಂದ್ರೀಯ ಮಟ್ಟದಲ್ಲಿಯೇ ಆಗಿರಲಿ. ಜಮಾಅತಿನೊಳಗೆ ಅಹಿತಕರವಾದ ವಾತಾವರಣ ಉಂಟಾಗದಿರಲಿ. ತರಬೇತಿಯ ಕಾರ್ಯಗಳು ನಡೆಯುತ್ತಿರಲು ಕೇಂದ್ರವು ತಮ್ಮ ಜಮಾಅತಿನ ಹುದ್ದೇದಾರರಿಗೆ ನೆರವಾಗಿ ನಿಲ್ಲಬೇಕು.

ಕೆಲವು ಬಾರಿ ಹೆತ್ತವರ ಮಧ್ಯಪ್ರವೇಶದಿಂದ ವಿವಾಹಗಳು ನಡೆಯುತ್ತಿಲ್ಲ ಎಂದು ಹುಝೂರಿಗೆ ಹೇಳಲಾಯಿತು. ಇದಕ್ಕೆ ಪ್ರತಿಕ್ರಯಿಸುತ್ತಾ ಹುಝೂರ್ ಹೇಳಿದರು: ಇಂತಹ ಹೆತ್ತವರು ಎಷ್ಟಿದ್ದಾರೆ ಎಂದು ಅವಲೋಕಿಸಿ ಅವರಿಗೆ ಮನವರಿಕೆ ಮಾಡಿಸಬೇಕು.

ಹುಝೂರ್ ಹೇಳಿದರು: ನಾನೀಗ ಯು.ಕೆ.ಯಲ್ಲಿ ಎರಡು ವಿವಾಹ ಸಂಬಂಧ ನಿಶ್ಚಯ ಮಾಡಿಸಿದ್ದೇನೆ. ಮಕ್ಕಳು ಸುರಕ್ಷಿತವಾಗಿರಲಿಕ್ಕಾಗಿ ಅವರ ವಿವಾಹ ನಡೆಸಲು ಹೆತ್ತವರಿಗೆ ತಿಳಿಸಬೇಕು. ಅವರು ಒಪ್ಪುವುದಿಲ್ಲವಾದರೆ, ಹೀಗೆ ಹೇಳಿರಿ: 'ಅವರು(ಮಕ್ಕಳು) ನಮ್ಮ ಬಳಿಗೆ ಬಂದರೆ, ಅವರು ತಪ್ಪುಗಳಿಂದ ಸುರಕ್ಷಿತವಾಗಿರಲಿಕ್ಕಾಗಿ ನಾವು ಅವರ ವಿವಾಹ ಮಾಡಿಸುವೆವು'. ಹುಝೂರ್ ಹೇಳಿದರು: ಆದರೆ ಇಂತಹ ಪ್ರತಿಯೊಂದು ಪರಿಸ್ಥಿತಿಯಲ್ಲಿ ನನ್ನಿಂದ ಖಂಡಿತವಾಗಿಯೂ ಅನುಮತಿ ಪಡೆಯಬೇಕು.

ಹುಝೂರ್ ಹೇಳಿದರು: ಹೆತ್ತವರನ್ನು ಸಹ ಕೌನ್ಸಿಲಿಂಗ್ ಮಾಡಬೇಕಾದ ಆವಶ್ಯಕತೆ ಇದೆ. ಹೆತ್ತವರನ್ನು ಬೇರೆ ಕರೆದು ಕೌನ್ಸಿಲಿಂಗ್ ನಡೆಸಬೇಕು.

ಹುಝೂರ್ ಹೇಳಿದರು: ಕೆಲವು ತಾಯಂದಿರು ವಿದ್ಯಾವಂತರು, ಕೆಲವರು ಅವಿದ್ಯಾವಂತರು. ಎರಡೂ ಗುಂಪಿನವರ ಆಲೋಚನೆಗಳಲ್ಲಿ

ವ್ಯತ್ಯಾಸವಿದೆ. ಅವರ ಆಲೋಚನೆ ಮತ್ತು ಚಿಂತನೆ ಪ್ರಕಾರ ಕೌನ್ಸಿಲಿಂಗ್ ನಡೆಸಬೇಕು.

ಹುಝೂರ್ ಹೇಳಿದರು: ಹುಡುಗಿ ಮದುವೆಯ ನಂತರ ಸಹ ಕಲಿಯುವಳು ಎಂದೂ ಗಂಡನ ಮನೆಯವರು ಅದರ ಖರ್ಚು ನೋಡಬೇಕು ಎಂದೂ ಕೆಲವು ಬಾರಿ ಶರತ್ತು ಇಡಲಾಗುತ್ತದೆ. ಇದು ಸರಿಯಲ್ಲ. ವಿವಾಹದ ನಂತರ ಕಲಿಯುವುದಾದರೆ ಗಂಡನ ಅನುಮತಿಯಿಂದ ಆಗಿರಬೇಕು. ಇಲ್ಲದಿದ್ದರೆ ವಿವಾಹಕ್ಕೆ ಮುಂಚೆಯೇ ಮನೆಯಿಂದ ಕಲಿತು ಬರಬೇಕು.

ಖುದ್ದಾಮ್ ಮತ್ತು ಲಜ್‌ನದಲ್ಲಿನ ಯಾರನ್ನಾದರೂ ರಿಶ್ತನಾತಕ್ಕೆ ಸಂಬಂಧಪಟ್ಟು ನಿಶ್ಚಯಿಸಬೇಕು ಎಂಬ ಮಾತಿಗೆ ಪ್ರತಿಕ್ರಯಿಸುತ್ತಾ ಹುಝೂರ್ ಹೇಳಿದರು: ಯಥಾರ್ಥ ಕೆಲಸ ಜಮಾಅತಿನ ರಿಶ್ತನಾತ ವಿಭಾಗದ್ದಾಗಿದೆ. ಆದರೆ ಈ ಕೆಲಸವನ್ನು ಖುದ್ದಾಮ್‌ನಿಂದ ಅಧ್ಯಕ್ಷರ ಸಹಾಯಕರಲ್ಲಿ ಒಬ್ಬರಿಗೆ ಮತ್ತು ಲಜ್‌ನದಿಂದ ಅಧ್ಯಕ್ಷೆಯ ಸಹಾಯಕರಲ್ಲಿ ಒಬ್ಬಳಿಗೆ ತಂತಮ್ಮ ಪಟ್ಟಿಗಳನ್ನು ಅಪ್‌ಡೇಟ್ ಮಾಡುವ ಮಟ್ಟಿಗೆ ಒಪ್ಪಿಸಬಹುದು. ಅದೇ ರೀತಿಯಲ್ಲಿ ಲಜ್‌ನ ಸಂಘಟಿಸುವ ಸೆಮಿನಾರ್‌ಗಳು, ತಾಯಂದಿರನ್ನು ಮತ್ತು ಹುಡುಗಿಯರನ್ನು ಕರೆದು ವೈವಾಹಿಕ ಸಂಬಂಧದ ಸಮಸ್ಯೆಗಳ ಕುರಿತು ಮಾತನಾಡುವ ಕೆಲಸ, ಇಸ್ಲಾಮಿನ ಅಧ್ಯಾಪನೆಗಳ ಕುರಿತು ಹೇಳುವ ಮತ್ತು ಮನವರಿಕೆ ಮಾಡಿಸುವ ಕೆಲಸಗಳು ಅಧ್ಯಕ್ಷರ ಸಹಾಯಕಳಿಂದ ಮಾಡಿಸಬಹುದಾಗಿದೆ. ಖುದ್ದಾಮಿನ ಅಧ್ಯಕ್ಷರ ಸಹಾಯಕನಿಂದ ಸಹ ಈ ಕೆಲಸ ಮಾಡಿಸಬಹುದಾಗಿದೆ. ಆದರೆ ಇವರಿಬ್ಬರೂ ನಿಮಗೆ ನಿಯತವಾದ ರಿಪೋರ್ಟ್ ಸರ್ಮಪಿಸಲು ನಿರ್ಬಂಧಿತರಲ್ಲ. ಅವರಿಗೆ ಅವರದಾದ ಸಂಘಟನೆಯಿದೆ. ನಿಮ್ಮಲ್ಲಿರುವ ಹೆಸರು ಪಟ್ಟಿ ಅಪ್‌ಡೇಟ್ ಆಗಿರಲು ಸದರ್ ಖುದ್ದಾಮ್ ಮತ್ತು ಸದರ್ ಲಜ್‌ನದ ಮೂಲಕ ಪಟ್ಟಿಯನ್ನು ಪಡೆಯಬಹುದಾಗಿದೆ. ಪ್ರತಿ ತಿಂಗಳ ಕೊನೆಗೆ ಈ ಪಟ್ಟಿಯನ್ನು ಅವರಿಂದ ಪಡೆಯಬಹುದಾಗಿದೆ.

**ರಿಶ್ತನಾತ ಸಮಿತಿ ಯು.ಕೆ.ಗೆ ಹಝ್ರತ್ ಖಲೀಫತುಲ್ ಮಸೀಹರ(ಅಯ್ಯದಹುಲ್ಲಾಹ್) ನಿರ್ದೇಶನಗಳು:**

ಹುಝೂರ್ ಹೇಳಿದರು: ಕಳೆದ ವರ್ಷ ಎಷ್ಟು ವಿವಾಹ ಸಂಬಂಧ ನೆರವೇರಿತು ಮತ್ತು ಅದರಲ್ಲಿ ಎಷ್ಟು ವಿವಾಹ ವಿಚ್ಛೇದನ ನಡೆಯಿತು ಎಂದು ಪರೀಕ್ಷಿಸಿರಿ. ಇಲ್ಲಿ ನಡೆದ 270 ವಿವಾಹಗಳಲ್ಲಿ ಎಷ್ಟು ಖುಲಾ/ತಲಾಖ್(ವಿವಾಹ ವಿಚ್ಛೇದನ) ನಡೆದಿದೆ ಎಂದು ನೋಡಿರಿ.

ಹುಝೂರ್ ಹೇಳಿದರು: ಯೂರೋಪಿನಲ್ಲಿ ವಿವಾಹಗಳು ಮುರಿದು ಹೋಗುವ ಮತ್ತು ವಿಚ್ಛೇದನದ ರೋಗ ವರ್ಧಿಸುತ್ತಾ ಇದೆ. ತರಬೇತಿ ವಿಭಾಗ ಮುಖ್ಯವಾದ ಪಾತ್ರವಹಿಸಬೇಕು. ತರಬೇತಿ ವಿಭಾಗ ಮತ್ತು ಇಸ್ಲಾಹಿ ಸಮಿತಿಗಳೆಲ್ಲರೂ ಸೇರಿ ಕೆಲಸ ಮಾಡಿರಿ. ಇಸ್ಲಾಮಿನ ಪಾಠವೇನೆಂದೂ ಗಂಡ –ಹೆಂಡತಿಯರ ಕರ್ತವ್ಯಗಳೇನೆಂದೂ ಎಲ್ಲರಿಗೂ ಹೇಳಿಕೊಡಿರಿ. ವಿವಾಹ ಸಂಬಂಧ ಏಕೆ ಮಾಡಲಾಗುತ್ತದೆ ಮತ್ತು ವಿವಾಹದ ಉದ್ದೇಶ – ಲಕ್ಷ್ಯಗಳು ಏನೆಂದು ಮನವರಿಕೆ ಮಾಡಿಸಬೇಕು.

ಹುಝೂರ್ ಹೇಳಿದರು: ಪ್ರತಿ ತಿಂಗಳು ನಿಯತವಾಗಿ ಅಮೀರ್ ಸಾಹಿಬರೊಂದಿಗೆ ರಿಶ್ತನಾತ ವಿಭಾಗ ಮತ್ತು ಸಮಿತಿಯ ಮೀಟಿಂಗ್ ನಡೆಯಬೇಕು. ಅದರಲ್ಲಿ ಎಲ್ಲ ವಿಷಯಗಳನ್ನು ಚರ್ಚಿಸಬೇಕು.

ಹುಝೂರ್ ಹೇಳಿದರು: ಎರಡು – ಮೂರು ತಿಂಗಳಿಗೊಮ್ಮೆ ಖುದ್ದಾಮ್, ಲಜ್‌ನ, ಅನ್ಸಾರ್ ಮತ್ತು ಜಮಾಅತ್ ಮಟ್ಟದಲ್ಲಿ ಹೆತ್ತವರ ಮತ್ತು ಹುಡುಗ – ಹುಡುಗಿಯರ ಸೆಮಿನಾರ್ ನಡೆಯಬೇಕು. ಲಜ್‌ನ ತಮ್ಮದಾದ ರೀತಿಯಲ್ಲಿ ಬೇರೆ ಸೆಮಿನಾರ್ ಆಯೋಜಿಸಬಹುದು.

ಹುಝೂರ್ ಹೇಳಿದರು: ಕೆಲವು ಸಂಬಂಧಗಳು ಹುಡುಗಿಯರ ತಪ್ಪಾದ ಪ್ರತೀಕ್ಷೆಗಳ ಮತ್ತು ಅಭ್ಯಾಸಗಳ ಕಾರಣ ಮುರಿದು ಹೋಗುತ್ತವೆ. ಹುಡುಗನ ಸಾಂಪತ್ತಿಕ ಮಟ್ಟ ಮೆಲ್ಲಮೆಲ್ಲನೆ ಉತ್ತಮಗೊಳ್ಳುತ್ತದೆ. ಉದ್ಯೋಗ ಸಿಕ್ಕಿದ ನಂತರ ಮೆಲ್ಲಮೆಲ್ಲನೆ ಸಂಬಳ ವರ್ಧಿಸುತ್ತದೆ. ಇದಕ್ಕೆಲ್ಲ ಸಮಯ

ತಗಲುತ್ತದೆ. ಆದರೆ ಹುಡುಗಿ ಮೊದಲ ದಿನದಿಂದಲೇ ತಪ್ಪಾದ ಪ್ರತೀಕ್ಷೆ ಮತ್ತು ಅಭ್ಯಾಸಗಳೊಂದಿಗೆ ಬರುತ್ತಾಳೆ. ಈ ವಿಷಯವಾಗಿ ತರಬೇತಿ ನಡೆಸಬೇಕಾದುದು ತಂದೆ – ತಾಯಂದಿರ ಕರ್ತವ್ಯವಾಗಿದೆ.

ಹುಝೂರ್ ಹೇಳಿದರು: ಹುಡುಗಿಯರ ಚಲನವಲನ ಮತ್ತು ಚಟುವಟಿಕೆಗಳ ಬಗ್ಗೆ ಗೊತ್ತಾಗಿ ಬಿಡುತ್ತದೆ. ಹುಡುಗರ ಚಟುವಟಿಕೆಗಳು ಎಂಥದ್ದು ಎಂದು ಸಹ ಗಮನಿಸುತ್ತಿರಬೇಕು. ಇವು ರಿಶ್ತನಾತಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಕಾರಣವಾಗುತ್ತಿರುವ ತರಬೇತಿಗೆ ಸಂಬಂಧಿಸಿದ ಸಮಸ್ಯೆಗಳಾಗಿವೆ.

ವೆಬ್‌ಸೈಟ್ ಸಂಬಂಧವಾಗಿ ಹುಝೂರ್ ಹೇಳಿದರು: ಅದರಲ್ಲಿ ಫೋಟೊ ಕಳುಹಿಸದಿರಿ. ಯಾವ ರೀತಿಯ ಸೆಕ್ಯೂರಿಟಿ ಇರುವುದು? ಕೆಲವರು ವಿವಾಹ ಸಂಬಂಧ ನಡೆಯುತ್ತಿರುವವರ ಕುರಿತು ತಪ್ಪಾದ ಮಾಹಿತಿಗಳನ್ನು ಇತರರಿಗೆ ಅಥವಾ ಸಂಬಂಧ ನಡೆಸುತ್ತಿರುವ ಕುಟುಂಬಕ್ಕೆ ತಲುಪಿಸುತ್ತಾರೆ. ಅವರ ಸಂಬಂಧ ಮುರಿದು ಹೋಗುವಾಗ ಬೇರೆ ಜಾಗದಲ್ಲಿ ವಿವಾಹ ಸಂಬಂಧ ಆಗದಿರಲು ಹುಡುಗಿಯ ಮೇಲೆ ತಪ್ಪಾದ ಆರೋಪನೆಗಳನ್ನು ಹೊರಿಸುತ್ತಾರೆ. ನನಗೆ ಇದರ ಬಗ್ಗೆ ಮಾಹಿತಿ ಸಿಕ್ಕಿದ್ದರೆ ನಾನು ಅವರನ್ನು ಜಮಾಅತಿನ ವ್ಯವಸ್ಥೆಯಿಂದ ಹೊರಕ್ಕೆ ಹಾಕುತ್ತೇನೆ.

ಹುಝೂರ್ ಹೇಳಿದರು: ಯಾವನೆ ವ್ಯಕ್ತಿ ಯಾರ ಮೇಲಾದರೂ ತಪ್ಪಾದ ಆರೋಪ ಹೊರಿಸಿ ಇತರರನ್ನು ಸಂಶಯಗ್ರಸ್ತರನ್ನಾಗಿ ಮಾಡಿದರೆ ಅದರ ರಿಪೋರ್ಟ್ ನನಗೆ ಬರಬೇಕು. ಇಸ್ಲಾಹಿ ಸಮಿತಿ ತಮ್ಮ ಕೆಲಸ ಮಾಡುತ್ತಿದ್ದರೂ ಅದರ ರಿಪೋರ್ಟ್ ನನಗೆ ಬರಬೇಕು.

ಹುಝೂರ್ ಹೇಳಿದರು: ರಿಶ್ತನಾತ ಸಂಬಂಧಿಸಿ ಬರುವ ಎಲ್ಲ ಸಲಹೆಗಳನ್ನು ಪರಿಶೀಲಿಸಬೇಕು. ಈಸ್ಟ್ ಲಂಡನ್‌ನಿಂದ ಒಂದು ರಿಪೋರ್ಟ್ ಬಂದಿತ್ತು. ಅದನ್ನು ನಿಮಗೆ ಕಳುಹಿಸಲಾಗಿತ್ತು.

ಸೆಮಿನಾರ್ ನಡೆಸಬೇಕು ಎಂಬ ಸಲಹೆಯನ್ನು ಹುಝೂರಿನ ಮುಂದಿರಿಸಿದಾಗ ಹುಝೂರ್ ಹೇಳಿದರು: "ಈಗ ಆಗಬೇಕು ಎಂಬ ನೆಲೆಯನ್ನು ಬಿಟ್ಟು ಆಯಿತು ಎಂಬ ನೆಲೆಗೆ ಬನ್ನಿರಿ". ಆಗ ಹುಝೂರಿನ ಮುಂದೆ ಎಂಟು ಸೆಮಿನಾರ್ ನಡೆಸಿದ ರಿಪೋರ್ಟ್ ಸಮರ್ಪಿಸಲಾಯಿತು.

ಹುಝೂರ್ ಹೇಳಿದರು: ಈಸ್ಟ್ ಲಂಡನ್ ಜಮಾಅತಿನಲ್ಲಿ ಸಮಸ್ಯೆಗಳು ಅಧಿಕವಿದೆ. ಇದರ ಕಡೆಗೆ ಗಮನಹರಿಸಬೇಕು. ಬ್ರೇಡ್‌ಫೋರ್ಡ್, ಹಡಲ್ಸ್‌ಫೀಲ್ಡ್‌ನಲ್ಲಿ ಸಹ ಸಮಸ್ಯೆಗಳು ಉಂಟಾಗುತ್ತಿವೆ. ಈಸ್ಟ್ ಲಂಡನಿನಲ್ಲಿ ತಪ್ಪಾದ ಲಾಭ ಪಡೆದು ಜಮಾಅತ್ ವ್ಯವಸ್ಥೆಯ ವಿರುದ್ಧ ತಪ್ಪುಕಲ್ಪನೆ ಉಂಟುಮಾಡಲು ಪ್ರಯತ್ನಿಸುತ್ತಿದ್ದಾರೆ.

ಹುಝೂರ್ ಹೇಳಿದರು: ಜನರು ಏನೇ ಹೇಳಲಿ, ನಿಮ್ಮ ಸಿಬ್ಬಂದಿಗಳು (ಸ್ಟಾಫ್) ಒಳ್ಳೆಯ ರೀತಿಯಲ್ಲಿ, ಸೌಮ್ಯವಾಗಿ ಜನರೊಂದಿಗೆ ವ್ಯವಹರಿಸಬೇಕು. ನಿಮ್ಮ ರಿಶ್ತನಾತ/ವಸಿಯ್ಯತ್ ಇತ್ಯಾದಿ ಆಫೀಸುಗಳ ಜವಾಬುಗಳನ್ನು ಕೇಳುವಾಗ ತಪ್ಪು ಧಾರಣೆ ಉಂಟಾಗುತ್ತದೆ.

ಹುಝೂರ್ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರಿಂದ ಇಲ್ಲಿ ತನಕ ರಿಶ್ತನಾತಕ್ಕೆ ಸಂಬಂಧಿಸಿದ ನಿರ್ದೇಶನಗಳನ್ನು ಒಂದುಗೂಡಿಸಲಾಗಿದೆ. ಅವುಗಳನ್ನು ರಬ್‌ವದಿಂದ ಪಡೆದುಕೊಳ್ಳಿರಿ. ಅವುಗಳನ್ನು ಪುನರ್ ಪರಿಶೀಲಿಸಲಾಗುತ್ತಿದೆ.

ರಿಶ್ತನಾತಕ್ಕೆ ಸಂಬಂಧಿಸಿ 24/12/2010ರ ಅಲ್‌ಫಝ್ಲ್ ರಬ್‌ವದ ಪತ್ರಿಕೆಯಲ್ಲಿ ಪ್ರಕಟವಾದ ಹಝ್ರತ್ ಮಸೀಹ್ ಮೌಊದ್‌ರ(ಅ) ಒಂದು ಉದ್ಧರಣೆಯ ಕುರಿತು ಹುಝೂರ್ ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು: ಇದರ ಪ್ರಾಧಾನ್ಯ ನೂರು ವರ್ಷಗಳ ಹಿಂದೆ ಇದ್ದ ಹಾಗೆ ಈಗಲೂ ಇದೆ. ಹಝ್ರತ್ ಮಸೀಹ್ ಮೌಊದ್(ಅ) ಒಂದು ರಿಜಿಸ್ಟರ್ (ದಾಖಲು ಪುಸ್ತಕ) ಮಾಡಿದ್ದರು. ಅದರಲ್ಲಿ (ಹೆಸರುಗಳನ್ನು) ನಮೂದಿಸುತ್ತಿದ್ದರು.

ಪಾಕಿಸ್ತಾನದ ಆಗ್ಾಖಾನಿ ಹುಡುಗಿಯರ ಕುರಿತು ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು: ಅಲ್ಲಿಯ ವಿದ್ಯಾವಂತ ಹುಡುಗಿಯರು ಮುಂದಿನ ಪೀಳಿಗೆ ಸಂರಕ್ಷಿಸಲ್ಪಡಲಿ ಮತ್ತು ಕಲಿಯಲಿ ಎಂಬ ಒಂದೇ ಉದ್ದೇಶದಿಂದ ಕೇವಲ ಎಂಟನೇ, ಒಂಬತ್ತನೇ ತರಗತಿ ತನಕ ಕಲಿತ ಹುಡುಗರನ್ನು ಮದುವೆಯಾದರು.

ಹುಝೂರ್ ಹೇಳಿದರು: ವಿವಿಧ ಘಟನೆಗಳು ಮುಂದೆ ಬರುತ್ತಿವೆ. ಉದಾಹರಣೆಗೆ ಹುಡುಗನಿಗೆ ಕೆನಡಕ್ಕೆ ಹೋಗಿ ಅಲ್ಲಿ ನೆಲೆಸಲಿಕ್ಕಿರುತ್ತದೆ. ಆದರೆ ಹುಡುಗಿ ಹೋಗಲಿಕ್ಕೆ ತಯಾರಿರುವುದಿಲ್ಲ. ಹುಝೂರ್ ಹೇಳಿದರು: ಹುಡುಗಿ ತವರು ಮನೆಯಿಂದ ಹೋಗಬೇಕಾಗುತ್ತದೆ. ಹುಡುಗನ ಸಂಗತಿ ಹಾಗಲ್ಲ.

ಹುಝೂರ್ ಹೇಳಿದರು: ಹುಡುಗನ ಕಡೆಯವರು ವಿವಾಹ ಸಂಬಂಧವಾಗಿ ಹುಡುಗಿಯ ಮನೆಗೆ ಹೋಗುವ ಮುಂಚೆ ಎಲ್ಲ ಸಂಗತಿಗಳು ಮತ್ತು ಸ್ಥಿತಿಗತಿಗಳ ಬಗ್ಗೆ ಅರಿತಿರಲಿಕ್ಕಾಗಿ ಹಾಗೂ ವಿವರಗಳನ್ನು ಪಡೆಯದೇ ಮನೆಗೆ ಹೋಗಿ, ಹುಡುಗಿಯನ್ನು ನೋಡಿ, ತಿಂದು – ಕುಡಿದು ಮರಳಿ ಬಂದು ಜವಾಬು ಕೊಡುವ ಸನ್ನಿವೇಶ ಉಂಟಾಗದಿರಲಿಕ್ಕಾಗಿ ಮುಂಚಿತವಾಗಿಯೇ ವಿಶದವಾದ ವಿವರಗಳನ್ನು ಪಡೆಯಲಾಗುತ್ತದೆ ಎಂದು ಹುಡುಗಿಯ ಕಡೆಯವರಿಗೆ ತಿಳಿಸಿಕೊಡಬೇಕು. ಎಲ್ಲ ವಿವರಗಳು ಮೊದಲೇ ಲಭ್ಯವಾದರೆ ಇಂತಹ ಅವಸ್ಥೆಗಳು ಕಡಿಮೆಯಾಗುವುದು.

ಹುಝೂರ್ ಹೇಳಿದರು: ಹುಡುಗಿಯ ವೈಯಕ್ತಿಕ ವಿವರಗಳನ್ನು ಆದಷ್ಟು ಮಟ್ಟಿಗೆ ಶೇಖರಿಸಿರಿ, ಆದರೆ ಅವೆಲ್ಲ ರಹಸ್ಯವಾಗಿಟ್ಟಿರಬೇಕು.

ಫೋಟೋ ನೋಡಿದ ನಂತರ ನಿರಾಕರಿಸುತ್ತಾರೆ ಎಂದು ಯು.ಕೆ.ಯ ಅಮೀರ್ ಸಾಹಿಬ್ ಹೇಳಿದರು. ಇದಕ್ಕೆ ಉತ್ತರವಾಗಿ ಹುಝೂರ್ ಹೇಳಿದರು: ಮೊದಲಿಗೆ ಹುಡುಗಿಯ ಬಗ್ಗೆ ವಿವರಗಳನ್ನು ನೀಡಿರಿ. ಆಮೇಲೆ ಫೋಟೋ ತೋರಿಸಿರಿ.

ಹುಝೂರ್ ಹೇಳಿದರು: ತಂದೆ – ತಾಯಂದಿರ ಮತ್ತು ಹಿರಿಯರ ತರಬೇತಿಯ ಆವಶ್ಯಕತೆ ಇದೆ. ಮನೆಯ ವಾತಾವರಣ ಉತ್ತಮವಾಗಿದ್ದರೆ,

ತಂದೆ ತಾಯಂದಿರು ಸಂತೋಷವಾಗಿದ್ದರೆ ಮಕ್ಕಳ ತರಬೇತಿ ಸಹ ಉತ್ತಮ ರೀತಿಯಲ್ಲಿ ಆಗುವುದು. ಮನೆಗೆ ಬರಲಿರುವ ಮದುಮಗಳಿಗೆ ಸಹ ಮನೆಯಲ್ಲಿ ಉತ್ತಮ ವಾತಾವರಣ ಲಭಿಸುವುದು.

ಹುಝೂರ್ ಹೇಳಿದರು: ವಿವಾಹಗಳಿಗೆ ಮುಂಚೆ ಮಾತ್ರವಲ್ಲ, ವಿವಾಹಗಳ ನಂತರ ಸಹ ನಿಮ್ಮ ವಿಭಾಗ ಶ್ರದ್ಧೆವಹಿಸಬೇಕು.

ಹುಝೂರ್ ಹೇಳಿದರು: ರಿಶ್ತನಾತಕ್ಕೆ ಸಂಬಂಧಿಸಿ ಖುದ್ದಾಮ್, ಲಜ್ನ ಮಾಡಬೇಕಾದ ಕೆಲಸಗಳನ್ನು ಅವರು ಮಾಡಲಿ. ನೀವು ನಿಮ್ಮ ಕೆಲಸಗಳನ್ನು ಮಾಡಬೇಕಾಗಿದೆ. ವಿವಿಧ ರೀತಿಯ ಪರಿಶೀಲನೆ ನಡೆಯುತ್ತಿರಬಹುದು. ವಿವಿಧ ಸ್ಥಳಗಳಿಂದ ಮಾಹಿತಿಗಳು ಬರುತ್ತಿರಬಹುದು. ಪರಿಶೀಲನೆ ಉತ್ತಮ ರೀತಿಯಲ್ಲಾದರೆ ಕೆಲಸಗಳು ಉತ್ತಮವಾಗುವುವು.

ವೆಬ್‌ಸೈಟ್ ತಯಾರಿಸುವುದರ ಬಗ್ಗೆ ಹುಝೂರ್ ಹೇಳಿದರು: ಸರಿ, ಮುನ್ನೆಚ್ಚರಿಕೆಯ ಕ್ರಮಗಳೊಂದಿಗೆ ಶುರುಮಾಡಿರಿ.

ಹುಝೂರ್ ಹೇಳಿದರು: ಸಂಬಂಧ ಹುಡುಕುವುದರಲ್ಲಿ ಮತ್ತು ಸಂಬಂಧ ನಿಶ್ಚಯಿಸುವುದರಲ್ಲಿ ಸ್ವತಃ ಪ್ರಯತ್ನ ಮಾಡುವವರು ಮಾಡುತ್ತಿರಲಿ. ಆದರೆ ಅವರ ಪ್ರಯತ್ನ ಸಫಲವಾಗಿ, ಸಂಬಂಧ ನಿಶ್ಚಯಿಸಲ್ಪಟ್ಟರೆ, ಅದರ ವಿವರ ನಿಮಗೆ ಬರಬೇಕಾಗಿದೆ. ಆಗ ನಿಮ್ಮ ಪಟ್ಟಿಯಿಂದ ಅವರ ಹೆಸರನ್ನು ತೆಗೆಯಬಹುದಾಗಿದೆ. ಬೇಗನೇ ಒಟ್ಟೊಟ್ಟಿಗೆ ನಿಮಗೆ ವಿವರಗಳು ಬಂದಿರಬೇಕು. ನಿಶ್ಚಿತಾರ್ಥ ಮತ್ತು ನಿಕಾಹಿನ ನಡುವೆ ನಾಲ್ಕಾರು ತಿಂಗಳ ಕಾಲಾವಧಿ ಇರುವುದು ಮಾಮೂಲು. ನಿಶ್ಚಯವಾದ ನಂತರ ಬೇರೆ ಯಾರಾದರೂ ವಿವಾಹ ಸಂಬಂಧ ಸ್ಥಾಪಿಸಲು ಹೋಗಿ, ಅದು ಇಷ್ಟವಾಗಿ ಮೊದಲು ನಿಶ್ಚಯಿಸಿದ ಸಂಬಂಧ ಕೊನೆಗೊಳಿಸಿದರೆ ಸಮಸ್ಯೆ ಉಂಟಾಗುವುದು.

ಹುಝೂರ್ ಹೇಳಿದರು: ಜಮಾಅತಿನ ತರಬೇತಿ ವಿಭಾಗ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲವು ಮನೆಗಳಲ್ಲಿ ಹುಡುಗಿಯರು ದೊಡ್ಡವರಾಗಿ (ವಿವಾಹದ) ವಯಸ್ಸು ಮೀರಿ ಇರುತ್ತಾರೆ. ತಂದೆ –

ತಾಯಂದಿರು ಗಮನ ಹರಿಸುವುದಿಲ್ಲ. ಹುಡುಗಿ ತನಗೆ ಇಷ್ಟವಾದ ಸಂಬಂಧವನ್ನು ಸ್ವತಃ ಹುಡುಕುತ್ತಾಳೆ.

ಹುಝೂರ್ ಹೇಳಿದರು: ರಿಶ್ತನಾತದ ವಿಭಾಗ ಬಹಳ ಮುಖ್ಯವಾದ ವಿಭಾಗವಾಗಿದೆ. ನಿಮ್ಮ ಶ್ರದ್ಧೆ ಇದರಲ್ಲಿ ಇರಬೇಕು. ನಿಯತವಾಗಿ ಇದರ ರಿಪೋರ್ಟ್ ಬರಬೇಕಾಗಿದೆ.

ಹುಝೂರ್ ಹೇಳಿದರು: ಹುಡುಗಿಯರಿಗೆ ಸ್ಪಷ್ಟವಾಗಿ ಮಾತುಕತೆ ನಡೆಸಲು ಸಾಧ್ಯವಾಗಲಿಕ್ಕಾಗಿ ಅವರ ಪ್ರತ್ಯೇಕವಾದ ಸೆಮಿನಾರ್ ನಡೆಯಬೇಕು.

ಹುಝೂರ್ ಹೇಳಿದರು: ಹುಡುಗರಿಗೆ ತಮ್ಮ ಮನಸಿನಲ್ಲಿರುವುದನ್ನು ವ್ಯಕ್ತಪಡಿಸಲು ಸಾಧ್ಯವಾಗಲಿಕ್ಕಾಗಿ ಖುದ್ದಾಮ್ ತಮ್ಮ ಪ್ರತ್ಯೇಕವಾದ ಸೆಮಿನಾರ್ ನಡೆಸಬೇಕು.

ಹುಝೂರ್ ಹೇಳಿದರು: ತಾತ್ಕಾಲಿಕ ಪ್ರಯೋಜನ ಮತ್ತು ಇಚ್ಛೆಗಾಗಿ ತಮ್ಮ ಸಂತತಿಗಳನ್ನು ಜಮಾಅತಿನಿಂದ ದೂರಮಾಡದಿರಿ, ತಮ್ಮ ಸಂಬಂಧವನ್ನೂ ನೆಲೆನಿಲ್ಲಿಸಿರಿ; ತಮ್ಮ ಮಕ್ಕಳನ್ನೂ ಸಂರಕ್ಷಿಸಿರಿ, ತಮ್ಮ ಮಕ್ಕಳ ಸಂರಕ್ಷಣೆಗಾಗಿ ತ್ಯಾಗ ಮಾಡಿರಿ, ಸಹನೆ ಮತ್ತು ಧೈರ್ಯಶೀಲತೆಯನ್ನು ವಿಶಾಲಗೊಳಿಸಿರಿ ಎಂದೆಲ್ಲ ಹೇಳಿಕೊಡಬೇಕು.

ಹುಝೂರ್ ಹೇಳಿದರು: ನಾವು ಅಹ್ಮದಿಯಾಗಿರುವುದು ಏಕೆ? ಇದರ ಪ್ರಾಧಾನ್ಯವೇನು? ನಮ್ಮ ವ್ಯಕ್ತಿತ್ವವನ್ನು ನಾವು ಹೇಗೆ ಕಾಪಾಡಬೇಕು? ಹಝ್ರತ್ ಮಸೀಹ್ ಮೌಊದ್‌ರನ್ನು[ಅ] ನಾವೇಕೆ ನಂಬಿದ್ದೇವೆ? ಎಂಬೀ ವಿಷಯಗಳ ಅರಿವು ಮೂಡಿಸಬೇಕು. ಹುಝೂರ್ ಹೇಳಿದರು: 'ಇವೆಲ್ಲ ಸಣ್ಣ ಸಣ್ಣ ಸಂಗತಿಗಳಾಗಿವೆ. ಎಲ್ಲರೂ ತಿಳಿದಿರಬೇಕು.